ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 4ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

ದಿನಾಂಕ: 13-04-2010,

ಸ್ಥಳ:

ಕೊಠಡಿ ಸಂಖ್ಯೆ:341, 3ನೇ ಮಹಡಿ,

ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ,

ವಿಧಾನ ಸೌಧ, ಬೆಂಗಳೂರು

HASSAN INSTITUTE OF MEDICAL SCIENCES, HASSAN
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
(An Autonomous Medical Institution, Government of Karnataka)
Sri Chamarajendra Hospital Campus, Hassan -573 201
Website:www.hims-hassan.org Phone/Fax No. 08172-231699, 231599

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಯ ನಾಲ್ಕನೇ ಆರ್ಥಿಕ ಸಮಿತಿ ಸಭೆ ನಡಾವಳಿಗಳು

05

ದಿನಾಂಕ:13-04-2010ರ ಮಂಗಳವಾರ, ಬೆಳಿಗ್ಗೆ 11-30ಗಂಟೆಗೆ ಗೌರವಾನ್ವಿತ ಪ್ರಧಾನ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ:341, ವಿಧಾನ ಸೌಧ, ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಾಲ್ಕನೇ ಆರ್ಥಿಕ ಸಮಿತಿ ಸಭೆ ಸೇರಿ ನಡೆಸಿದ ಸಭಾ ನಡುವಳಿಗಳು.

**ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು:**

| | | |
|---|---|---|
| 1 | ಶ್ರೀ ವಿ. ಉಮೇಶ್,<br>ಪ್ರಧಾನ ಕಾರ್ಯದರ್ಶಿಗಳು( ವೈ.ಶಿ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಧಾನ ಸೌಧ, ಬೆಂಗಳೂರು. | : ಅಧ್ಯಕ್ಷರು |
| 2 | ಶ್ರೀ ಗಣೇಶ ಮೂರ್ತಿ, (ಉಪ ಕಾರ್ಯದರ್ಶಿಗಳು),<br>ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಇವರ ಪರವಾಗಿ<br>ವಿಧಾನ ಸೌಧ, ಬೆಂಗಳೂರು. | : ಸದಸ್ಯರು |
| 3 | ಡಾ. ಅರುಣಾ,<br>ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಆನಂದರಾವ್ ವೃತ್ತ , ಬೆಂಗಳೂರು. | : ಸದಸ್ಯರು |
| 4 | ಡಾ. ಕೆ.ಎಸ್. ಗಂಗಾಧರ,<br>ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ,ಹಾಸನ. | : ಸದಸ್ಯರು |

5 ಶ್ರೀ. ಜಯರಾಂ, : ಸದಸ್ಯರು
ಮುಖ್ಯ ಆಡಳಿತಾಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

6 ಶ್ರೀ. ಶ್ರೀನಿವಾಸ ಗೌಡ : ಸದಸ್ಯ ಕಾರ್ಯದರ್ಶಿ
ಆರ್ಥಿಕ ಸಲಹೆಗಾರರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ಸಭಾ ಆಹ್ವಾನ ಪತ್ರವನ್ನು ಓದಿ ರೆಕಾರ್ಡ್ ಮಾಡುವುದು. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆರ್ಥಿಕ ಅಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿಯವರಾದ ಶ್ರೀನಿವಾಸ ಗೌಡರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸಭೆಗೆ ಆಹ್ವಾನ ಮಾಡಿ ನಂತರ ಸಭಾಆಹ್ವಾನ ಪತ್ರವನ್ನು ಓದಿ ರೇಕಾರ್ಡ್ ಮಾಡಲಾಯಿತು. |
| 2 | ದಿನಾಂಕ: 16-07-2009ರಂದು ನಡೆದ ಮೂರನೇ ಆರ್ಥಿಕ ಸಭೆಯ ನಡುವಳಿಗಳ ಬಗ್ಗೆ ತೆಗೆದುಕೊಂಡ ಕ್ರಮದ ಅನುಪಾಲನ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ: 16-07-2009ರಂದು ನಡೆದ ಮೂರನೇ ಆರ್ಥಿಕ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 3 | ದಿನಾಂಕ:08-10-2009 ರಂದು ನಡೆದ ಖರೀದಿ ಸಮಿತಿ ಸಭೆಯ ನಡುವಳಿಯನ್ನು ಓದಿ ರೆಕಾರ್ಡ್ ಮಾಡುವುದು ಹಾಗೂ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:08-10-2009ರಂದು ಸಂಸ್ಥೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಅಪರಕಾರ್ಯದರ್ಶಿಗಳು, ವೈ.ಶಿ. ಇಲಾಖೆ, ವಿಕಾಸ ಸೌಧ, ಬೆಂಗಳೂರು ಇಲ್ಲಿ ನಡೆದ ಖರೀದಿ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 01ರಿಂದ20ರ ವರೆಗಿನ (ಕೆಳಗೆ ನಮೂದಿಸಿರುವವಂತೆ) ನಡವಳಿಗಳನ್ನು ಓದಿ ಅಂಗೀಕರಿಸಿ ರೇಕಾರ್ಡ್ ಮಾಡಲಾಯಿತು ಹಾಗೂ ಸದರಿ ಸಭೆಯ ನಡವಳಿಗಳ ಮೇಲೆ ತೆಗೆದು ಕೊಂಡ ಕ್ರಮದ ಅನುಪಾಲನಾ ವರದಿಯನ್ನು ಸಹ ಅಂಗಿ ೀಕರಿಸಲಾಯಿತು. |

| ಕ್ರ. ಸಂ. | ವಿಷಯ | ತೀರ್ಮಾನ | ಅನುಪಾಲನ ವರದಿ |
|---|---|---|---|
| 3(1) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅವಶ್ಯಕವಿರುವ ರಾಸಾಯನಿಕ ವಸ್ತುಗಳು ಮತ್ತು ಇತರೆ ಉಪಕರಣಗಳನ್ನು ಖರೀದಿಸುವ ಬಗ್ಗೆ. | ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಾಮಾನುಸಾರ 2009- 10ನೇ ಸಾಲಿಗೆ ವಿವಿಧ ಬೋಧಕ ವಿಭಾಗಗಳಿಗೆ ಅವಶ್ಯಕವಿರುವ ರಾಸಾಯನಿಕ ವಸ್ತುಗಳು, ಉಪಕರಣಗಳು ಮತ್ತು ಸಲಕರಣೆಗಳನ್ನು ಖರೀದಿಸಲು 30-07-2008ರ ಖರೀದಿ ಸಮಿತಿ ನಡವಳಿಕೆಯ ಅನ್ವಯ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 99, ಉಪಬಂಧ(2)ರ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿರುತ್ತದೆ. ದಿನಾಂಕ: 27-01-2009 ರಂದು ರಾಜ್ಯದ ಎರಡು ದಿನ ಪತ್ರಿಕೆಯಲ್ಲಿ ಪ್ರಕಟಣೆಗೊಳಿಸಲಾಗಿದೆ. ( ಟೈಮ್ಸ್ ಆಫ್ ಇಂಡಿಯಾ ಮತ್ತು ವಿಜಯ ಕರ್ನಾಟಕ) ಇದರ ಅನ್ವಯ ಟೆಂಡರ್ ಪ್ರಕ್ರಿಯೆಯನ್ನು ನಿಯಾಮನುಸಾರ ಪೂರ್ಣಗೊಳಿಸಿ, ಈ ಕೆಳಕಂಡ 01 ರಿಂದ 05 ಷೆಡ್ಯೂಲ್‌ಗಳಿಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಚರ್ಚಿಸಿ ವಿತರಕರಿಗೆ ಸರಬರಾಜು ಆದೇಶ ನೀಡಲು ತೀರ್ಮಾನ ಕೈಗೊಳ್ಳಲಾಯಿತು. | -- |
| | **ಷೆಡ್ಯೂಲ್ ನಂ.1.** ಸಂಸ್ಥೆಯ ವಿವಿಧ ವಿಭಾಗಗಳ ಪ್ರಯೋಗಾಲಯಗಳಿಗೆ ಅವಶ್ಯಕವಿರುವ ಒಟ್ಟು357 ರಾಸಾಯನಿಕ ವಸ್ತುಗಳನ್ನು ಖರೀದಿಸುವ ಬಗ್ಗೆ. | ಷೆಡ್ಯೂಲ್ ನಂ.1ಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಮೂರು ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.<br>1. ಶ್ರೀ ಲಕ್ಷ್ಮಿ ಎಂಟರ್ ಪ್ರೈಸಸ್, ಹಾಸನ.<br>2. M/S ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರು.<br>3. ಹೈ ಟೆಚ್ ನಮನಾ ಸರ್ಜಿಕಲ್ , ಹಾಸನ.<br>ನಿಯಮಾನುಸಾರ ಟೆಂಡರ್ ತೆರೆದು ಸಂಸ್ಥೆಯ | **ಷೆಡ್ಯೂಲ್ ನಂ.1.(ಅ)**ಸಂಸ್ಥೆಗೆ ಅಗತ್ಯವಿರುವ ರಾಸಾಯನಿಕ ವಸ್ತುಗಳನ್ನು ಒಂದು ವರ್ಷದ ಅವಧಿಗೆ ಬೇಡಿಕೆ ಅನುಗುಣವಾಗಿ ಕಾಲಕಾಲಕ್ಕೆ ಸರಬರಾಜು ಮಾಡಲು ಶ್ರೀ ಲಕ್ಷ್ಮಿ ಎಂಟರ್ ಪ್ರೈಸಸ್, ಹಾಸನ. ಇವರಿಗೆ ಟೆಂಡರ್ ನೀಡಲಾಗಿದೆ. ಮೊದಲನೇ ಸರಬರಾಜು ಆದೇಶದಲ್ಲಿ 82,791.00ರೂಗಳನ್ನು ಪಾವತಿ |

| | | | | | |
|---|---|---|---|---|---|
| | | | | ಮೌಲ್ಯಮಾಪನ ಸಮಿತಿಯು ಮೌಲ್ಯಮಾಪನ ಮಾಡಿ ಕ್ರ.ಸಂ.1&2ರ ಟೆಂಡರ್‌ದಾರರು ತಾಂತ್ರಿಕವಾಗಿ ಅರ್ಹರಾಗಿದ್ದು. ಉಳಿದ ಕ್ರ.ಸಂ. 3ರ ಟೆಂಡರ್‌ದಾರರು ಅನರ್ಹರೆಂದು ಶಿಫಾರಸ್ಸು ಮಾಡಿದ್ದರ ಮೇಲೆ ದಿನಾಂಕ: 27-05-2009 ರಂದು ಟೆಂಡರ್ ಸಮಿತಿ ಸದಸ್ಯರು ಮತ್ತು ವಿಭಾಗದ ಮುಖ್ಯಸ್ಥರು ಟೆಂಡರ್‌ದಾರರ ಪ್ರತಿನಿಧಿಗಳ ಸಮಕ್ಷಮದಲ್ಲಿ ಪ್ರೈಸ್ ಬಿಡ್ ತೆರೆದು ದರಗಳನ್ನು ದಾಖಲಿಸಿರುತ್ತಾರೆ. ಇದರ ಹೋಲಿಕೆ ತ:ಖ್ತೆಯ ಅನ್ವಯ ಕ್ರ.ಸಂ.1ರ ಶ್ರೀ ಲಕ್ಷ್ಮಿ ಎಂಟರ್ ಪ್ರೈಸಸ್, ಹಾಸನರವರುರೂ.4,50,393-00 ಗಳನ್ನು ನಮೂದಿಸಿರುತ್ತಾರೆ. ಕ್ರ.ಸಂ.2ರ M/S. ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರುರವರು 5,73,097.00 ರೂಗಳನ್ನು ನಮೂದಿಸಿರುತ್ತಾರೆ. ಈ ಪೈಕಿ ಕಡಿಮೆ ದರ ನಮೂದಿಸಿರುವ **ಶ್ರೀ ಲಕ್ಷ್ಮಿ ಎಂಟರ್ ಪ್ರೈಸಸ್, ಹಾಸನರವರ ರಾಸಾಯನಿಕ ವಸ್ತುಗಳ ಮಾದರಿಯನ್ನು ಸಂಸ್ಥೆಯ ವಿಭಾಗದ ಮುಖ್ಯಸ್ಥರು ಗುಣಮಟ್ಟವು ಉತ್ತಮವಿರುವುದಾಗಿ ಶಿಫಾರಸ್ಸು ಮಾಡಿರುತ್ತಾರೆ.** ಆದ್ದರಿಂದ ಸದರಿಯವರಿಗೆ ಸರಬರಾಜು ಆದೇಶ ನೀಡಲು ತೀರ್ಮಾನ ಕೈಗೊಳ್ಳಲಾಯಿತು. | ಮಾಡಲಾಗಿದೆ. |
| | | | **ಷೆಡ್ಯೂಲ್ ನಂ.2**<br>ಸಂಸ್ಥೆಯ ವಿವಿಧ ವಿಭಾಗಗಳ ಪ್ರಯೋಗಾಲಯಗಳಿಗೆ ಅವಶ್ಯವಿರುವ ಒಟ್ಟು 104 ಐಟಂಗಳ ಗ್ಲಾಸ್ ವೇರ್ ಮತ್ತು ಗ್ಲಾಸ್ ಜಾರ್ಸ್ ಖರೀದಿಸುವ ಬಗ್ಗೆ. | ಷೆಡ್ಯೂಲ್ ನಂ.2 ಸಂಬಂಧಿಸಿದಂತೆ ಐದು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.<br>1. ಸನ್ ಬೀಮ್ ಗ್ಲಾಸ್ ವರ್ಕ್ಸ್ , ಮುಂಬೈ.<br>2. ಜಯ್ ಮೆಡಿಕಲ್ ಏಜೆನ್ಸಿಸ್, ಹುಬ್ಬಳ್ಳಿ.<br>3. ಲಕ್ಷ್ಮಿ ಎಂಟರ್ ಪ್ರೈಸಸ್, ಹಾಸನ.<br>4. M/s ಶ್ರೀ ವೆಂಕಟೇಶ್ವರ ಎಂಟರ್ ಪ್ರೆಸಸ್, | **ಷೆಡ್ಯೂಲ್ ನಂ.2:**ಸನ್ ಬೀಮ್ ಗ್ಲಾಸ್ ವರ್ಕ್ಸ್, ಮುಂಬೈರವರಿಗೆ 27 ಐಟಂ ವಸ್ತುಗಳಿಗೆ ಸರಬರಾಜು ಆದೇಶ ನೀಡಿ, ಸರಬರಾಜು ಪಡೆಯಲಾಗಿದೆ. ಬಿಲ್ ಬಾಬ್ತು 4,05,384.00ರೂಗಳನ್ನು ಪಾವತಿಸಿದೆ. ಅನುದಮೋದನೆಗಾಗಿ ಸಲ್ಲಿಸಿದೆ. |

| | | | | | | |
|---|---|---|---|---|---|---|
| | | | | ಬೆಂಗಳೂರು.<br>5. ಹೈ ಟೆಕ್ ನಮನಾ ಸರ್ಜಿಕಲ್, ಹಾಸನ.<br>ನಿಯಮಾನುಸಾರ ಟೆಂಡರ್ ತೆರೆದು ಸಂಸ್ಥೆಯ ಮೌಲ್ಯ ಮಾಪನ ಸಮಿತಿಯು ಮೌಲ್ಯಮಾಪನ ಮಾಡಿ ಕ್ರ.ಸಂ.1 & 4 ರ ಟೆಂಡರ್‌ದಾರರು ತಾಂತ್ರಿಕವಾಗಿ ಅರ್ಹರಾಗಿದ್ದು. ಉಳಿದ ಕ್ರ.ಸಂ. 2, 3 & 5 ರ ಟೆಂಡರ್‌ದಾರರು ಅನರ್ಹರೆಂದು ಶಿಫಾರಸ್ಸು ಮಾಡಿದ್ದರ ಮೇಲೆ, ದಿನಾಂಕ: 27-05-2009 ರಂದು ಟೆಂಡರ್ ಸಮಿತಿ ಸದಸ್ಯರು ಮತ್ತು ವಿಭಾಗದ ಮುಖ್ಯಸ್ಥರು ಟೆಂಡರ್‌ದಾರರ ಪ್ರತಿನಿಧಿಗಳ ಸಮಕ್ಷಮದಲ್ಲಿ ಪ್ರೈಸ್ ಬಿಡ್ ತೆರೆದು ದರಗಳನ್ನು ದಾಖಲಿಸಿರುತ್ತಾರೆ. ಇದರ ಹೋಲಿಕೆ ತ:ಖ್ತೆಯ ಅನ್ವಯ ಕ್ರ.ಸಂ.1ರ ಸನ್ ಬೀಮ್ ಗ್ಲಾಸ್ ವರ್ಕ್ಸ್ , ಮುಂಬೈ ರವರು, 27 ಐಟಂಗಳನ್ನು ಸರಬರಾಜು ಮಾಡಲು ಒಟ್ಟು ರೂ 4,26,720-00ಗಳನ್ನು ನಮೂದಿಸಿರುವುದನ್ನು ಮತ್ತು ಕ್ರ.ಸಂ.4ರ M/S. ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರುರವರು ಬೋರೋಸಿಲ್ ಕಂಪನಿಯ ಒಟ್ಟು 28 ಐಟಂಗಳ ವಸ್ತುಗಳಿಗೆ ರೂ.1,53,505-00ಗಳನ್ನು ನಮೂದಿಸಿರುವ ಬಗ್ಗೆ ಚರ್ಚಿಸಲಾಯಿತು.<br>ಸನ್ ಬೀಮ್‌ರವರ ಗ್ಲಾಸ್ ವರ್ಕ್ ಮತ್ತು ಗ್ಲಾಸ್ ಜಾರ್ಸ್‌ಗಳ ಮಾದರಿಯನ್ನು ಸಂಸ್ಥೆಯ ವಿಭಾಗದ ಮುಖ್ಯಸ್ಥರು ಗುಣಮಟ್ಟವು ಉತ್ತಮವಿರುವುದಾಗಿ ಶಿಫಾರಸ್ಸು ಮಾಡಿರುವುದರಿಂದ ಮತ್ತು ಸದರಿ ಸಂಸ್ಥೆಯವರು 5% ರಿಯಾಯಿತಿ ನೀಡಿ 4,05,384-00 ರೂಗಳಿಗೆ ಸರಬರಾಜು ಮಾಡುವುದಾಗಿ ಪತ್ರ ನೀಡಿರುವುದರಿಂದ ಸದರಿಯವರಿಗೆ 27 ಐಟಂಗಳನ್ನು | | |

| | | | |
|---|---|---|---|
| | | ಸರಬರಾಜು ಮಾಡುವಂತೆ ಸರಬರಾಜು ಆದೇಶ ನೀಡಲು ತೀರ್ಮಾನಿಸಲಾಯಿತು.<br>M/S. ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರುರವರಿಗೆ L1 ಆಗಿರುವ 28 ಐಟಂ ವಸ್ತುಗಳಿಗೆ ಸಂದಾನದ ಮೂಲಕ ಸರಬರಾಜು ಆದೇಶ ನೀಡಲು ತೀರ್ಮಾನಿಸಲಾಯಿತು.<br>ಉಳಿದ 49 ಐಟಂಗಳನ್ನು ಖರೀದಿಸಲು ವಿಭಾಗದ ಮುಖ್ಯಸ್ಥರೊಡನೆ ಚರ್ಚಿಸಿ ದರಪಟ್ಟಿ ಮೂಲಕ ಖರೀದಿಸಲು ತೀರ್ಮಾನಿಸಲಾಯಿತು. | M/S. ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರುರವರಿಗೆ 28 ಐಟಂ ವಸ್ತುಗಳಿಗೆ ಸಂದಾನದ ಮೂಲಕ ಶೇ8%ರಷ್ಟು ರಿಯಾಯಿತಿ ಪಡೆದು ಸರಬರಾಜು ಆದೇಶ ನೀಡಲಾಗಿರುತ್ತದೆ.<br>ಉಳಿದ ಐಟಂಗಳನ್ನು ದರಪಟ್ಟಿ ಮೂಲಕ ಖರೀದಿಸಲು ಸನ್ ಬಿಮ್ ಗ್ಲಾಸ್ ವರ್ಕ್ಸ್ , ಮುಂಬೈರವರಿಗೆ ಸರಬರಾಜು ಆದೇಶ ನೀಡಲಾಗಿದೆ. |
| | **ಷೆಡ್ಯೂಲ್ ನಂ.3**<br>ಪ್ರಯೋಗಾಲಯಗಳಿಗೆ ಅವಶ್ಯವಿರುವ ವಿವಿಧ ರೀತಿಯ ಸಣ್ಣ ಪ್ರಮಾಣದ ಉಪಕರಣಗಳ ಖರೀದಿಯ ಬಗ್ಗೆ<br>ಸಂಖ್ಯೆ 35. | ಈ ಷೆಡ್ಯೂಲ್ ನಂ. 03ಕ್ಕೆ ಸಂಬಂದಿಸಿದಂತೆ ಒಂದು ಸಂಸ್ಥೆ ಟೆಂಡರ್‌ನಲ್ಲಿ ಭಾಗವಹಿಸಿರುತ್ತದೆ.<br>1. M/S ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರು.<br>ನಿಯಮಾನುಸಾರ ಟೆಂಡರ್ ತೆರೆದು ಸಂಸ್ಥೆಯ ಮೌಲ್ಯ ಮಾಪನ ಸಮಿತಿಯು ಮೌಲ್ಯಮಾಪನ ಮಾಡಿ ಕ್ರ.ಸಂ.1 ರ ಟೆಂಡರ್‌ದಾರರು ತಾಂತ್ರಿಕವಾಗಿ ಅರ್ಹರೆಂದು ಶಿಫಾರಸ್ಸು ಮಾಡಿದ್ದರ ಮೇರೆ ದಿನಾಂಕ: 27-05-2009 ರಂದು ಟೆಂಡರ್ ಸಮಿತಿ ಸದಸ್ಯರು ಮತ್ತು ವಿಭಾಗದ ಮುಖ್ಯಸ್ಥರು ಟೆಂಡರ್‌ದಾರರ ಪ್ರತಿನಿಧಿಗಳ ಸಮಕ್ಷಮದಲ್ಲಿ ಪ್ರೈಸ್ ಬಿಡ್ ತೆರೆದು ದರಗಳನ್ನು ದಾಖಲಿಸಿರುತ್ತಾರೆ. ಈ ಷೆಡ್ಯೂಲ್‌ಗೆ ಸಂಬಂದಿಸಿದಂತೆ ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರುರವರು4,62,199-00ರೂಗಳನ್ನು ನಮೂದಿಸಿರುತ್ತಾರೆ. ಸದರಿ ಸಂಸ್ಥೆಯವರು 10% ರಿಯಾಯತಿ ನೀಡಿ 4,15,979-00ರೂಗಳಿಗೆ ಸರಬರಾಜು | **ಷೆಡ್ಯೂಲ್ ನಂ.3 (ಅ):**<br>M/S. ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್, ಬೆಂಗಳೂರುರವರು ಸರಬರಾಜು ಆದೇಶ ನೀಡಿಲಾಗಿದೆ. ಸರಬರಾಜು ನಿರೀಕ್ಷೆಯಲ್ಲಿರುತ್ತೇವೆ. ಸದರಿಯವರು ಶೇ 10% ರಿಯಾಯಿತಿ ನೀಡಲು ಒಪ್ಪಿರುತ್ತಾರೆ. ಬಿಲ್ ಬಾಬ್ತುರೂ.3,94,566.00<br>**ಷೆಡ್ಯೂಲ್ ನಂ.3 (ಆ)** : ಅಟಾಪ್ಸಿ ಟೇಬಲ್ ಮತ್ತು Autopsy saw ಇವುಗಳ ಖರೀದಿಗಾಗಿ ಹೊಸ ಟೆಂಡರ್ ಪ್ರಕ್ರಿಯೆಯಲ್ಲಿ ಸೇರಿಸಲಾಗಿದೆ. |

| | | | | |
|---|---|---|---|---|
| | | | ಮಾಡುವುದಾಗಿಪತ್ರ ನೀಡಿರುವುದರಿಂದ ಮತ್ತು ಉಪಕರಣಗಳ ಸಂಖ್ಯೆ 35 ಇದ್ದು ಚಿಕ್ಕ ಉಪಕರಣಗಳಾದ್ದರಿಂದ ಸದರಿಯವರಿಗೆ ಸರಬರಾಜು ಆದೇಶ ನೀಡಲು ತೀರ್ಮಾನಿಸಲಾಯಿತು.<br>ಹೆಚ್ಚು ಬೆಲೆಯುಳ್ಳ ಅಟಾಪ್ಸಿ ಟೇಬಲ್ ಮತ್ತು Autopsy saw ಇವುಗಳನ್ನು ಖರೀದಿ ಪ್ರಕ್ರಿಯೆಯಿಂದ ಕೈಬಿಟ್ಟು ಮರು ಟೆಂಡರ್ ಕರೆಯಲು ತೀರ್ಮಾನಿಸಲಾಯಿತು. | |
| | | **ಷೆಡ್ಯೂಲ್ ನಂ.4**<br>ಮೈಕ್ರೋಸ್ಕೋಪ್ಸ್ ಖರೀದಿ ಬಗ್ಗೆ.<br>Trinocular -01,Binocular -01 ಮತ್ತು Student Microscopes - 80. | ಷೆಡ್ಯೂಲ್ ನಂ.4ಕ್ಕೆ ಸಂಬಂದಿಸಿದಂತೆ ಎರಡು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.<br>1.ಡಿ.ಎಸ್.ಎಸ್. ಇಮೇಜ್ ಟೆಚ್, ಬೆಂಗಳೂರು.<br>2. ನಾವೆಲ್ ಟೆಕ್ನಲಾಜಿ , ಬೆಂಗಳೂರು.<br>ನಿಯಮಾನುಸಾರ ಟೆಂಡರ್ ತೆರೆದು ಸಂಸ್ಥೆಯ ಮೌಲ್ಯ ಮಾಪನ ಸಮಿತಿಯು ಮೌಲ್ಯಮಾಪನ ಮಾಡಿ ಕ್ರ.ಸಂ.1 ಮತ್ತು 2ರ ಟೆಂಡರ್‌ದಾರರು ತಾಂತ್ರಿಕವಾಗಿ ಅರ್ಹರೆಂದು ಶಿಫಾರಸ್ಸು ಮಾಡಿದ್ದರ ಮೇರೆಗೆ, ದಿನಾಂಕ:27-05-2009 ರಂದು ಟೆಂಡರ್ ಸಮಿತಿ ಸದಸ್ಯರು ಮತ್ತು ವಿಭಾಗದ ಮುಖ್ಯಸ್ಥರು ಟೆಂಡರ್‌ದಾರರ ಪ್ರತಿನಿಧಿಗಳ ಸಮಕ್ಷಮದಲ್ಲಿ ಪ್ರೈಸ್ ಬಿಡ್ ತೆರೆದು ದರಗಳನ್ನು ದಾಖಲಿಸಿರುತ್ತಾರೆ. ಕ್ರ.ಸಂ.1ರ ಡಿ.ಎಸ್.ಎಸ್. ಇಮೇಜ್ ಟೆಚ್, ಬೆಂಗಳೂರುರವರ Trinocular Microscopes & ಕ್ರ.ಸಂ.2ರ ನಾವೆಲ್ ಟೆಕ್ನಲಾಜಿ, ಬೆಂಗಳೂರುರವರ Binocular Microscopesಗಳ ತಾಂತ್ರಿಕ ವಿವರಗಳನ್ನು ವಿಭಾಗದ ಮುಖ್ಯಸ್ಥರು ತಿರಸ್ಕರಿಸಿರುವುದರಿಂದ ಈ ಎರಡು Microscopesಗಳನ್ನು | **ಷೆಡ್ಯೂಲ್ ನಂ.4 :**<br>**Trinocular Microscopes** ಖರೀದಿಸಲು ಹೊಸ ಟೆಂಡರ್‌ನಲ್ಲಿ ಸೇರಿಸಲಾಗಿದೆ.<br>**01 Binocular Microscopes** ಅನ್ನು Labmate(Asia)Pvt.Ltd., Bangalore ರವರಿಂದ ಖರೀದಿಸಿದ್ದು 84,375.00ರೂಗಳ ಬಿಲ್ ಬಾಬ್ತು ಪಾವತಿಸಲು ಬಾಕಿ ಇರುತ್ತದೆ.<br>**80 Student Microscopesಗಳನ್ನು** M/s.Novel technologies, Bangalore ರವರಿಂದ ಖರೀದಿಸಿದ್ದು ಬಿಲ್ ಪಾವತಿಯಾಗಿ ರುತ್ತದೆ. ಬಿಲ್ ಬಾಬ್ತು ರೂ.10,850.00x80 =86,80,000.00 |

| | | | | | |
|---|---|---|---|---|---|
| | | | | ಟೆಂಡರ್ ಪ್ರಕ್ರಿಯೆಯಿಂದ ಕೈ ಬಿಡಲಾಗಿದೆ. ಹಾಗೂ Binocular Microscopesನ ಅಂದಾಜು ವೆಚ್ಚ 85,000-00 ರಿಂದ 90,000-00ಗಳಾಗಿರುವುದರಿಂದ ಇದನ್ನು ಕೋಟೇಶನ್ ಮುಖಾಂತರ ಖರೀದಿಸಲು ತೀರ್ಮಾನಿಸಲಾಯಿತು.<br>Student Microscopes ಗಳಿಗೆ ನಾವೆಲ್ ಟೆಕ್ನಲಾಜಿ , ಬೆಂಗಳೂರು ರವರು ಉಪಕರಣವೊಂದಕ್ಕೆ 11025-00 ರೂಗಳನ್ನು ನಮೂದಿಸಿರುವುದನ್ನು ಒಪ್ಪಿ ಸದರಿ ಸಂಸ್ಥೆಯವರಿಗೆ Student Microscopesಗಳನ್ನು ಸಂದಾನದ ಮೂಲಕ ಸರಬರಾಜು ಮಾಡಲು ತೀರ್ಮಾನ ಕೈಗೊಳ್ಳಲಾಯಿತು. ಪೆಥಾಲಜಿ ವಿಭಾಗ ಮತ್ತು ಆಸ್ಪತ್ರೆಯ ವಿವಿಧ ವಿಭಾಗಗಳಿಂದ ಈ ಮೈಕ್ರೋಸ್ಕೋಪ್‌ಗಳು ತುರ್ತಾಗಿ ಅವಶ್ಯಕತೆ ಇದೆ ಎಂದು ಕೋರಿಕೆ ಸಲ್ಲಿಸಿರುವುದರಿಂದ 80 Student Microscopeಗಳನ್ನು ಖರೀದಿಸಲು ತೀರ್ಮಾನಿಸಲಾಯಿತು. | |
| | | | **ಷೆಡ್ಯೂಲ್ ನಂ.5**<br>Lead E.E.G. Machine ಖರೀದಿ ಬಗ್ಗೆ ಸಂಖ್ಯೆ -01 | ಷೆಡ್ಯೂಲ್ ನಂ.5ಕ್ಕೆ ಸಂಬಂಧಿಸಿದಂತೆ ಮೂರು ಸಂಸ್ಥೆಗಳು ಟೆಂಡರ್ ನಲ್ಲಿ ಭಾಗವಹಿಸಿರುತ್ತಾರೆ.<br>1. ಮೆಡಿಕೇರ್ ಸಿಸ್ಟಮ್ , ಗಾಂಧಿಗರ್<br>2. ರೇಕಾಡರ್ಸ್ ಮತ್ತು ಮೆಡಿಕೇರ್ ಸಿಸ್ಟಮ್, ಸೋಲಾನ್.<br>3. ಇಂಕೋ ಪ್ರೈ.ಲಿ. ಅಂಬಾಲ.<br>ನಿಯಮಾನುಸಾರ ಟೆಂಡರ್ ತೆರೆದು ಸಂಸ್ಥೆಯ ಮೌಲ್ಯ ಮಾಪನ ಸಮಿತಿಯು ಮೌಲ್ಯಮಾಪನ ಮಾಡಿ ಕ್ರ.ಸಂ.1, 2 ಮತ್ತು 3 ರ ಟೆಂಡರ್‌ದಾರರು ತಾಂತ್ರಿಕವಾಗಿ ಅರ್ಹರಾಗಿ ರುತ್ತಾರೆ. ಆದರೆ ಕ್ರ.ಸಂ.1 ಮತ್ತು 3ರ ಟೆಂಡರ್‌ದಾರರು ಸಂಸ್ಥೆಗೆ ಬಂದು ಉಪಕರಣವನ್ನು ಪ್ರಾತ್ಯಕ್ಷತೆಗೆ | **ಷೆಡ್ಯೂಲ್ ನಂ.5** : ರೇಕಾಡರ್ಸ್ ಮತ್ತು ಮೆಡಿಕೇರ್ ಸಿಸ್ಟಮ್, ಸೋಲಾನ್. ಬೆಂಗಳೂರುರವರಿಂದ Lead E.E.G. Machineಗೆ ಸರಬರಾಜು ಆದೇಶ ನೀಡಿ . ಸರಬರಾಜು ಪಡೆದು ಬಿಲ್‌ಪಾವತಿಸಿದೆ. ಬಿಲ್ ಬಾಬ್ತುರೂ. 4,68,000.00 |

| | | | |
|---|---|---|---|
| | | ಹಾಜರುಪಡಿಸಿಲ್ಲದ ಕಾರಣ ಇವರುಗಳನ್ನು ಅನರ್ಹರೆಂದು ಪರಿಗಣಿಸಿ ಉಳಿದ ಕ್ರ.ಸಂ.2ರ ಪ್ರಾತ್ಯಕ್ಷತೆಯನ್ನು ವಿಭಾಗದ ಮುಖ್ಯಸ್ಥರುಗುಣಮಟ್ಟವು ಉತ್ತಮವಿರುವುದಾಗಿ ಶಿಫಾರಸ್ಸು ಮಾಡಿರುತ್ತಾರೆ. ಇದರ ಅನ್ವಯ ದಿನಾಂಕ: 27-05-2009 ರಂದು ಟೆಂಡರ್ ಸಮಿತಿ ಸದಸ್ಯರು ಮತ್ತು ವಿಭಾಗದ ಮುಖ್ಯಸ್ಥರು ಟೆಂಡರ್‌ದಾರರ ಪ್ರತಿನಿಧಿಗಳ ಸಮಕ್ಷಮದಲ್ಲಿ ಪ್ರೈಸ್ ಬಿಡ್ ತೆರೆದು ದರಗಳನ್ನು ದಾಖಲಿಸಿರುತ್ತಾರೆ. ರೇಕಾಡರ್ಸ್ ಮತ್ತು ಮೆಡಿಕೇರ್ ಸಿಸ್ಟಮ್, ಸೋಲಾನ್‌ರವರು ನಮೂದಿಸಿರುವ ದರ ರೂ.4,68,000-00ಗಳು ಮಾರುಕಟ್ಟೆಗೆ ಸಮೀಪವಾಗಿ ರುತ್ತದೆ. ಈ ಉಪಕರಣವನ್ನು ಎರಡನೇ ಬಾರಿ ಮರು ಟೆಂಡರ್ ಮಾಡಿರುವುದಿರಂದ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ . ರೇಕಾಡರ್ಸ್ ಮತ್ತು ಮೆಡಿಕೇರ್ ಸಿಸ್ಟಮ್, ಸೋಲಾನ್.ಇವರಿಗೆ ಸಂದಾನದ ಮೂಲಕ ಸರಬರಾಜು ಆದೇಶ ನೀಡಲು ತೀರ್ಮಾನಿಸಲಾಯಿತು. | |
| 3(2) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ , ಕಂಪ್ಯೂಟರ್-15, ಯು.ಪಿ.ಎಸ್-15, ಪ್ರಿಂಟರ್ಸ್-15, ಲ್ಯಾಪ್ ಟಾಪ್ -02 ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳು , ಕಛೇರಿ ಮತ್ತು ಶ್ರೀ ಚಾಮರಾಜೇಂದ್ರ ಅಸ್ಪತ್ರೆಗೆ ಕಂಪ್ಯೂಟರ್-15, ಯು.ಪಿ.ಎಸ್-15, ಪ್ರಿಂಟರ್ಸ್ -15, ಲ್ಯಾಪ್ ಟಾಪ್ -02 ಗಳ ಅವಶ್ಯಕತೆ ಇದ್ದು ಇವುಗಳನ್ನು ಡಿ.ಜಿ.ಎಸ್ &ಡಿ ದರದಲ್ಲಿ ಖರೀದಿಸಬಹುದಾಗಿದ್ದು ಇವುಗಳಿಗೆ ಅಂದಾಜು ವೆಚ್ಚ 6,45,000-00 ರೂಗಳಾಗುವುದರ ಬಗ್ಗೆ ಚರ್ಚಿಸಿ ಕಂಪ್ಯೂಟರ್-15, ಯು.ಪಿ.ಎಸ್-15, ಪ್ರಿಂಟರ್ಸ್-15, ಲ್ಯಾಪ್ ಟಾಪ್ -02 ಡಿ.ಜಿ.ಎಸ್ & ಡಿ ದರದಲ್ಲಿ ಖರೀದಿಸಲು ತೀರ್ಮಾನಿಸಿ ಸಂಸ್ಥೆಯ ಅವಶ್ಯಕತೆಗಳನ್ನು | ಕೇಂದ್ರ ಗ್ರಂಥಾಲಯಕ್ಕೆ Digital Library ವ್ಯವಸ್ಥೆಯನ್ನು ಅಳವಡಿಸಲು ಟೆಂಡರ್ ಕರೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಅತಿ ಶೀಘ್ರದಲ್ಲಿ Library, ಕಛೇರಿ, ಆಸ್ಪತ್ರೆಗೆ ಅಗತ್ಯವಿರುವ ಕಂಪ್ಯೂಟರ್-15, ಯು.ಪಿ.ಎಸ್-15, ಪ್ರಿಂಟರ್ಸ್ -15, ಲ್ಯಾಪ್ ಟಾಪ್-02 ಗಳನ್ನು ಡಿ.ಜಿ.ಎಸ್.& ಡಿ. ದರದಲ್ಲಿ ಖರೀದಿಸಲು ಕ್ರಮಕೈಗೊಳ್ಳ ಲಾಗುವುದು. |

| | | | |
|---|---|---|---|
| | | ವಿವರಿಸಿ ಜಿಲ್ಲಾ ಎನ್.ಐ.ಸಿ. (National Informatics Centre)ರವರಿಗೆ ಪತ್ರ ಬರೆದು ಸೂಕ್ತವಾದ Specification ಪಡೆದು ನಂತರ ಖರೀದಿಸುವುದೆಂದು ತೀರ್ಮಾನಿಸಲಾಯಿತು. | |
| 3(3) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಪೆಥಾಲಜಿ ವಿಭಾಗ ಮತ್ತು ಉಪನ್ಯಾಸ ಕೊಠಡಿ ಸಂಖ್ಯೆ 4ಕ್ಕೆ ಯು.ಪಿ.ಎಸ್. ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪೆಥಾಲಜಿ ವಿಭಾಗ ಮತ್ತು ಉಪನ್ಯಾಸ ಕೊಠಡಿ ಸಂಖ್ಯೆ 4ಕ್ಕೆ ತಲಾ ಒಂದರಂತೆ 2ಯು.ಪಿ.ಎಸ್‌ಗಳನ್ನು ಖರೀದಿಸಬೇಕಾಗಿರುತ್ತದೆ. ಆದ್ದರಿಂದ 2 ಯು.ಪಿ.ಎಸ್ ಗಳ ಅಂದಾಜು ವೆಚ್ಚ ರೂ 88,000-00ಗಳಾಗಿರುತ್ತದೆ. 2ಯು.ಪಿ.ಎಸ್ ಗಳನ್ನು ದರಪಟ್ಟಿ ಆಧಾರದಲ್ಲಿ ಖರೀದಿಸಲು ತೀರ್ಮಾನಿಸಲಾಯಿತು. | ಅಗತ್ಯವಿರುವ ಯು.ಪಿ.ಎಸ್‌ಗಳನ್ನು ಎಮ್.ಡಿ. ಪವರ್ ಪ್ರಾಡಕ್ಟ, ಹಾಸನ ಇವರಿಂದ ಖರೀದಿಸಿ ಬಿಲ್ ಪಾವತಿಸಿದೆ. ಬಿಲ್ ಬಾಬ್ತು : 99,500.00 |
| 3(4) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸೆಯ ವಿವಿಧ ವಿಭಾಗಗಳಿಗೆ ಎಲ್.ಸಿ.ಡಿ. ಪ್ರಾಜೆಕ್ಟರ್ ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಕೊಠಡಿ 4ಕ್ಕೆ ಮಲ್ಟಿಮಿಡಿಯಾ ಎಲ್.ಸಿ.ಡಿ.ಪ್ರಾಜೆಕ್ಟರ್ ಇದರ ಅಂದಾಜು ವೆಚ್ಚ 2ಲಕ್ಷರೂಗಳು ಮತ್ತು ಸಮುದಾಯ ವೈದ್ಯಶಾಸ್ತ್ರ ವಿಭಾಗ ಮತ್ತು ಅಂಗರಚನಾ ಶಾಸ್ತ್ರ ವಿಭಾಗದ ನಿರೂಪಣಾ ಕೊಠಡಿಗೆ ಎಲ್.ಸಿ.ಡಿ. ಪ್ರಾಜೆಕ್ಟರ್ ಅವಶ್ಯಕತೆ ಇರುತ್ತದೆ ಇದರ ಅಂದಾಜು ವೆಚ್ಚ 1ಲಕ್ಷದ 20 ಸಾವಿರ ರೂಗಳು ಮತ್ತು 1 Portable Multimedia projector (in built Computer) ಅಂದಾಜು ವೆಚ್ಚ 3 ಲಕ್ಷ ರೂಗಳಾಗುವುದರ ಬಗ್ಗೆ ಚರ್ಚಿಸಿ ಸದರಿ ಉಪಕರಣಗಳನ್ನು ಡಿಜಿಎಸ್ & ಡಿ ದರದಲ್ಲಿ ಖರೀದಿಸಲು ತೀರ್ಮಾನಿಸಲಾಯಿತು. | ಅನುದಾನದ ಕೊರತೆ ಇರುವುದರಿಂದ ಮಲ್ಟಿ ಮಿಡಿಯಾ ಎಲ್.ಸಿ.ಡಿ. ಪ್ರಾಜೆಕ್ಟರ್ / ಎಲ್.ಸಿ.ಡಿ.ಪ್ರಾಜೆಕ್ಟರ್ / 1 Portable Multimedia projector (in built Computer) ಖರೀದಿಸಿರುವುದಿಲ್ಲ. ಇವುಗಳು ಅಗತ್ಯವಾಗಿದ್ದು ಅನುದಾನ ಬಿಡುಗಡೆಯಾದ ನಂತರ ಡಿ.ಜಿ.ಎಸ್.&ಡಿ. ದರದಲ್ಲಿ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು. |
| 3(5) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಕ್ಕೆ ವೋಲ್ಟೇಜ್ ಸ್ಟಾಬ್ಲೇಸರ್ ಖರೀದಿಸುವ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಕ್ಕೆ 20 ವೋಲ್ಟೇಜ್ ಸ್ಟಾಬ್ಲೇಸರ್ ಗಳ ಅವಶ್ಯಕತೆ ಇದ್ದು ಇವುಗಳ ಅಂದಾಜು ವೆಚ್ಚ 75,000-00 ರೂಗಳಿಗೆ | ವಿಭಾಗದ ಮುಖ್ಯಸ್ಥರಿಂದ ಬೇಡಿಕೆ ಪತ್ರವನ್ನು ಪಡೆದಿದ್ದು ಪರಿಶೀಲಿಸಿ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು |

| | | | |
|---|---|---|---|
| | ಬಗ್ಗೆ. | ದರಪಟ್ಟಿ ಮುಖಾಂತರ ಖರೀದಿಸಲು ತೀರ್ಮಾನಿಸಲಾಯಿತು. | |
| 3(6) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಡೆಂಟಲ್ ವಿಭಾಗಕ್ಕೆ 1 ಡೆಂಟಲ್ ಚೇರ್ ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಯ ಡೆಂಟಲ್ ವಿಭಾಗಕ್ಕೆ ಚಿಕಿತ್ಸೆ ಡೆಂಟಲ್ ಚೇರ್ ಅವಶ್ಯಕತೆ ಇದ್ದು, 1 ಲಕ್ಷದ ಮಿತಿಯೊಳಗೆ ದರ ಪಟ್ಟಿ ಕರೆದು ಖರೀದಿಸಲು ತೀರ್ಮಾನಿಸಲಾಯಿತು. | ಡೆಂಟಲ್ ವಿಭಾಗಕ್ಕೆ ಅವಶ್ಯವಿದ್ದ ಡೆಂಟಲ್ ಚೇರ್ ಅನ್ನು H.R.Dental & Medical Equipment Incರವರಿಂದ ಖರೀದಿಸಲಾಗಿದೆ. ಬಿಲ್ ಬಾಬ್ತು: 98,800.00 |
| 3(7) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿನ ವಿದ್ಯಾರ್ಥಿಗಳಿಗೆ ಅವಶ್ಯಕವಿರುವ ಕ್ರೀಡಾ ಸಾಮಾಗ್ರಿಗಳನ್ನು ಮತ್ತು ಮ್ಯೂಜಿಕಲ್ Instruments ಗಳನ್ನು ವಿದ್ಯಾರ್ಥಿ ನಿಧಿಯಿಂದ ಖರೀದಿಸುವ ಬಗ್ಗೆ. | ಸಂಸ್ಥೆಯ ವಿದ್ಯಾರ್ಥಿಗಳಿಗೆ Gymnasium ಉಪಕರಣದ ಅವಶ್ಯಕತೆ ಇದ್ದು ಇದರ ಅಂದಾಜು ವೆಚ್ಚ 1,00,000-00 ರೂಗಳಾಗಿದ್ದು ಇದನ್ನು ದರಪಟ್ಟಿ ಮುಖಾಂತರ ಖರೀದಿಸಲು ಅನುಮತಿ ಕೋರಿದೆ.ಸಂಸ್ಥೆಯವಿದ್ಯಾರ್ಥಿಗಳಿಗೆ Musical Instruments ಉಪಕರಣದ ಅವಶ್ಯಕತೆ ಇದ್ದು ಇದರ ಅಂದಾಜು ವೆಚ್ಚ 70,000-00 ರೂಗಳಾಗಿದ್ದು ಇದನ್ನು ದರಪಟ್ಟಿ ಮುಖಾಂತರ ಖರೀದಿಸಲು ಅನುಮತಿ ಕೋರಿದೆ. ಸಂಸ್ಥೆಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ 2 table tennis ಟೇಬಲ್ ಗಳ ಅವಶ್ಯಕತೆ ಇದ್ದು, ಇದರ ಅಂದಾಜು ವೆಚ್ಚ ಸಂಸ್ಥೆಯ 75,000-00 ಗಳಾಗಿದ್ದು ದರಪಟ್ಟಿ ಮುಖಾಂತರ ಖರೀದಿಸಲು ತೀರ್ಮಾನಿಸಲಾಯಿತು.<br>ಸಂಸ್ಥೆಯ ವಿದ್ಯಾರ್ಥಿಗಳಿಗೆ Sports Goods ಗಳು ಅವಶ್ಯಕತೆ ಇದ್ದು , ಇದರ ಅಂದಾಜು ವೆಚ್ಚ 60,000-00 ಗಳಾಗಿದ್ದು ದರಪಟ್ಟಿ ಮುಖಾಂತರ ಖರೀದಿಸಲು ಕೋರಿದೆ. ಈ ನಾಲ್ಕು ಐಟಂಗಳು ಬೇರೆ ಬೇರೆ ರೀತಿಯ ಐಟಂಗಳಾಗಿದ್ದರಿಂದ ದರಪಟ್ಟಿ ಆಧಾರದಲ್ಲಿ ಖರೀದಿಸಲು ತೀರ್ಮಾನಿಸಿ ಈ ಬಾಬ್ತನ್ನು ವಿದ್ಯಾರ್ಥಿ ನಿಧಿಯಿಂದ ಪಾವತಿಸುವುದೆಂದು ನಿರ್ಣಯ ಕೈಗೊಳ್ಳಲಾಯಿತು. | ಕ್ರೀಡಾ ಸಾಮಗ್ರಿಗಳನ್ನು ಒಲಂಪಿಕ್ ಸ್ಪೋರ್ಟಿಂಗ್ ಕಂಪನಿರವರಿಗೆ ಸರಬರಾಜು ಆದೇಶ ನೀಡಿದ್ದು ಸರಬರಾಜು ಪಡೆದು 65,041.00 ರೂಗಳನ್ನು ಪಾವತಿ ಮಾಡಿದೆ. ರೆನಾಲ್ಡ್ಸ್ ಐ.ಎನ್.ಸಿ.ಯವರಿಗೆ Muscial Instruments ಸರಬರಾಜು ಮಾಡಲು ಆದೇಶ ನೀಡಿದ್ದು ರೂ.44,500.00ರೂಗಳನ್ನು ಪಾವತಿಸಿದೆ. |

| | | | | | |
|---|---|---|---|---|---|
| | | 3(8) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯ ವಿಭಾಗಕ್ಕೆ ಡಿಜಿಟಲ್ ಲೈಬ್ರರಿ ಅಳವಡಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಡಿಜಿಟಲ್ ಲೈಬ್ರರಿ ಅಳವಡಿಸಲು 35-40 ಕಂಪ್ಯೂಟರ್‌ಗಳ ಅವಶ್ಯಕತೆ ಇರುತ್ತದೆ. ಇದಕ್ಕಾಗಿ 35-40 ಕಂಪ್ಯೂಟರ್‌ಗಳು ಪೀಠೋಪಕರಣಗಳು ಮತ್ತು ಸಾಫ್ಟ್‌ವೇರ್‌ನ ಅವಶ್ಯಕತೆ ಇರುತ್ತದೆ. ಸದರಿ ಕಂಪ್ಯೂಟರ್‌ಗಳನ್ನು ಡಿ.ಜಿ.ಎಸ್&ಡಿ ದರದಲ್ಲಿ ಖರೀದಿಸಿ ಮತ್ತು ಉಳಿದ ಐಟಂಗಳು ಸೇರಿ ಅಂದಾಜು ವೆಚ್ಚ 20ಲಕ್ಷರೂಗಳಾಗುವುದರ ಬಗ್ಗೆ ಚರ್ಚಿಸಿ ಡಿ.ಜಿ.ಎಸ್.& ಡಿ ದರದಲ್ಲಿ ದೊರೆಯುವ ಉಪಕರಣಗಳನ್ನು ಡಿ.ಜಿ.ಎಸ್.&ಡಿ ದರದಲ್ಲಿ ಖರೀದಿಸಿ ಇತರೆ ಅವಶ್ಯಕತೆಗಳನ್ನು ದರ ಪಟ್ಟಿ ಮೂಲಕ ಖರೀದಿಸಬಹುದೆಂದು ತೀರ್ಮಾನಿಸಲಾಯಿತು.<br>ಅಜೆಂಡಾ 4ರ ತೀರ್ಮಾನದಂತೆ ಗ್ರಂಥಾಲಯದಲ್ಲಿ ಈ ಕಂಪ್ಯೂಟರ್‌ಗಳ ಅಗತ್ಯತೆಯನ್ನು ವಿವರಿಸಿ ಸೂಕ್ತವಾದ Specificationನನ್ನು ಜಿಲ್ಲಾ ಎನ್.ಐ.ಸಿಯಿಂದ ಪಡೆದು ನಂತರ ಕಂಪ್ಯೂಟರ್‌ಗಳನ್ನು ಖರೀದಿಸಲು ತೀರ್ಮಾನಿಸಲಾಯಿತು. | ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ Digital Library ಸೌಲಭ್ಯವನ್ನು ಅಳವಡಿಸುವುದರ ಬಗ್ಗೆ ಚರ್ಚೆ ಮತ್ತು ಅನುಮೋದನೆಗಾಗಿ ಅಜೆಂಡಾ ಕ್ರಮ ಸಂಖ್ಯೆ: 05ರಲ್ಲಿ ಮಂಡಿಸಿದೆ. |
| | | 3(9) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪರೀಕ್ಷಾ ಕೊಠಡಿಗೆ 70 ಪರೀಕ್ಷಾ ಕುರ್ಚಿಗಳನ್ನು ಖರೀದಿಸಿರುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪರೀಕ್ಷಾ ಕೊಠಡಿಗೆ 70 ಪರೀಕ್ಷಾ ಕುರ್ಚಿಗಳ ಅವಶ್ಯಕತೆ ಇದ್ದು ಇವುಗಳನ್ನು ಘಟನ್ನೋತರ ಮಂಜುರಾತಿಯ ನಿರೀಕ್ಷಣೆಯ ಮೇಲೆ ದರಪಟ್ಟಿ ಮುಖಾಂತರ 99,750-00 ರೂಗಳಿಗೆ ಖರೀದಿಸಿರುವುದನ್ನು ಒಪ್ಪಿ ಅನುಮೋದನೆ ನೀಡಲಾಯಿತು. | ಘಟನೋತ್ತರ ಅನುಮತಿ ಪಡೆಯಲಾಗಿದೆ. |
| | | 3(10) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಕ್ಕೆ 3 ಸೀಟರ್ಸ್ ಚೇರ್ಸ್ ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಾಲಕ ಮತ್ತು ಬಾಲಕಿಯರ ವಸತಿ ನಿಲಯ, ಆಡಳಿತ ಕಛೇರಿಯ ವಿಭಾಗದ ಸಂದರ್ಶಕರ ಕೊಠಡಿಗೆ 3 ಸೀಟರ್ಸ್ 30ಚೇರ್ಸ್ ಅವಶ್ಯಕತೆ ಇದ್ದು ಇವುಗಳನ್ನು ದರಪಟ್ಟಿ ಮುಖಾಂತರ | ಅರ್ಜುನ್ ಏಜೆನ್ಸೀಸ್ , ಹಾಸನ ಇವರಿಂದ ದರಪಟ್ಟಿ ಯ ಮೂಲಕ ಖರೀದಿಸಲಾಗಿದೆ. ಬಿಲ್‌ಬಾಬ್ತು: 7,500x13=97500.00 ಪಾವತಿ ಮಾಡಲಾಗಿದೆ. |

| | | | |
|---|---|---|---|
| | | ಖರೀದಿಸಲು ತೀರ್ಮಾನಿಸಲಾಯಿತು. | |
| 3(11) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯ ವಿಭಾಗಕ್ಕೆ Reading room chairs/ Reference section chairs ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ 50 ಸಂಖ್ಯೆ Reading room chairs/ 100 ಸಂಖ್ಯೆ Reference section chairsಗಳ ಅವಶ್ಯಕತೆ ಇದ್ದು ಇವುಗಳನ್ನು ದರಪಟ್ಟಿ ಮೂಲಕ ಖರೀದಿಸಲು ತೀರ್ಮಾನಿಸಲಾಯಿತು. | ಅರ್ಜುನ್ ಏಜೆನ್ಸೀಸ್, ಹಾಸನ ಇವರಿಂದ ದರಪಟ್ಟಿಯ ಮೂಲಕ 84,150.00ರೂಗಳಿಗೆ 85 Reading Chairs without arm ಖರೀದಿಸಿದ್ದು . ಬಿಲ್ ಪಾವತಿಯಾಗಿರುವುದಿಲ್ಲ. ಅರ್ಜುನ್ ಏಜೆನ್ಸೀಸ್, ಹಾಸನ ಇವರಿಂದ ದರಪಟ್ಟಿಯ ಮೂಲಕ 98,719.00ರೂಗಳಿಗೆ 65 Library Chairs with arm ಖರೀದಿಸಿದ್ದು . ಬಿಲ್ ಪಾವತಿಯಾಗಿರುವುದಿಲ್ಲ. |
| 3(12) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪೆಥಾಲಜಿ ವಿಭಾಗಕ್ಕೆ Slotted Angles ಖರೀದಿಸುವಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪೆಥಾಲಜಿ ವಿಭಾಗಕ್ಕೆ Chemical & Specimen ಗಳನ್ನು ಇಡಲು Storeroom & Histopathology ಪ್ರಯೋಗಾಲಯಕ್ಕೆ 6x5x1 Feet , 6 set Slotted Anglesಗಳ ಅವಶ್ಯಕತೆ ಇರುವುದನ್ನು ಚರ್ಚಿಸಿ ವಿಭಾಗದ ಮುಖ್ಯಸ್ಥರಿಂದ Specification ಪಡೆದು ದರಪಟ್ಟಿ ಮುಖಾಂತರ ಖರೀದಿಸಲು ತೀರ್ಮಾನಿಸಲಾಯಿತು. | ಅರ್ಜುನ್ ಏಜೆನ್ಸೀಸ್, ಹಾಸನ ಇವರಿಗೆ 01 Slotted Anglesಗಳ ಖರೀದಿಸಲಲು 54,562.00ರೂಗಳಿಗೆ ಸರಬರಾಜು ಆದೇಶ ನೀಡಿದೆ. |
| 3(13) | ಪೆಥಾಲಜಿ ವಿಭಾಗಕ್ಕೆ Museum Racksಗಳನ್ನು ಖರೀದಿಸುವ ಬಗ್ಗೆ. | ಪೆಥಾಲಜಿ ವಿಭಾಗಕ್ಕೆ Museum Racksಗಳನ್ನು ಖರೀದಿಸಲು ವಿಭಾಗ ಮುಖ್ಯಸ್ಥರಿಂದ Specification ಪಡೆದು ದರಪಟ್ಟಿ ಮೂಲಕ ಖರೀದಿಸಲು ತೀರ್ಮಾನಿಸಲಾಯಿತು. | ಅರ್ಜುನ್ ಏಜೆನ್ಸೀಸ್, ಹಾಸನ ಇವರಿಂದ 05 Museum Racksಗಳನ್ನು ಖರೀದಿಸಲು 99,750.00ರೂಗಳಿಗೆ ಸರಬರಾಜು ಆದೇಶ ನೀಡಲಾಗಿದೆ. |
| 3(14) | ವೈದ್ಯಕೀಯ ಅಧೀಕ್ಷಕರು /ಜಿಲ್ಲಾ ಶಸ್ತ್ರಚಿಕಿತ್ಸಕರು,ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನರವರು ಔಷಧಿಗಳ ಅಗತ್ಯತೆಯ ಬಗ್ಗೆ ಕೋರಿ ಬರೆದಿರುವ ಪತ್ರದ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಸರ್ಕಾರದಿಂದ ಔಷಧಿ ಮತ್ತು ರಾಸಾಯನಿಕ ವಸ್ತುಗಳ ಖರೀದಿಗಾಗಿ 1 ಕೋಟಿ ರೂಗಳನ್ನು ಸರ್ಕಾರವು ನಿಗದಿ ಪಡಿಸಿರುತ್ತದೆ. ಆಸ್ಪತ್ರೆಯಲ್ಲಿ ಒಳ ಮತ್ತು ಹೊರ ರೋಗಿಗಳ ಸಂಖ್ಯೆ ಹೆಚ್ಚು ಇರುವುದರಿಂದ ಅನುದಾನವು | ಬೋಧಕ ಆಸ್ಪತ್ರೆಯ ಅನುದಾನವು ಹಿಮ್ಸ್, ಸಂಸ್ಥೆಗೆ ವರ್ಗಾವಣೆ ಯಾಗುವುದರಿಂದ ಹಿಮ್ಸ್ , ಸಂಸ್ಥೆಯ ಮೂಲಕ ಟೆಂಡರ್ ಕರೆದು ಔಷಧಿ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು. |

| | | | | | |
|---|---|---|---|---|---|
| | | | | ಮುಗಿಯುವ ಹಂತಕ್ಕೆ ಬಂದಿದೆ. ತಿಂಗಳಿಗೆ 10 ಲಕ್ಷದಷ್ಟು ಔಷಧಿಗಳು ಬೇಕಾಗಿರುತ್ತವೆ. User`s ನಿಧಿಯಲ್ಲಿ ಹಣದ ಕೊರತೆಯಿರುವುದರಿಂದ Rate Contract Listನಲ್ಲಿ ಇರುವ ಔಷಧಿಗಳನ್ನು ಖರೀದಿಸುವ ಬಗ್ಗೆ ಚರ್ಚಿಸಲಾಯಿತು. ಇದರ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು ಐ.ಎಫ್.ಎ ಯಿಂದ ಅನುಮತಿ ಪಡೆದು ನಂತರ ಆರ್.ಸಿ. ಲಿಸ್ಟ್‌ನಲ್ಲಿರುವ ಔಷಧಿಗಳನ್ನು ಖರೀದಿಸಲು ತೀರ್ಮಾನ ಕೈಗೊಳ್ಳಲಾಯಿತು. | |
| | | 3(15) | ಬೋಧಕೇತರ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಅರ್ಜಿ, ಮಾಹಿತಿ ಪುಸ್ತಕ, ರಸೀದಿ ಪುಸ್ತಕ, Covers, ಸ್ವೀಕೃತಿ ಪತ್ರ ಮುದ್ರಣ ಮಾಡಿಸಿರುವ ಬಗ್ಗೆ. | ಅ) ಸಂಸ್ಥೆಗೆ ಅಗತ್ಯವಿರುವ 307 ಬೋಧಕೇತರ ಸಿಬ್ಬಂದಿಯವರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿದ್ದು ಅಭ್ಯರ್ಥಿಗಳಿಗೆ ಅವಶ್ಯಕವಿರುವ ಈ ಕೆಳಕಂಡವುಗಳನ್ನು ಮುದ್ರಣ ಮಾಡಿಸಿದ್ದು ಘಟನೋತ್ತರ ಮಂಜೂರಾತಿಯ ನಿರೀಕ್ಷಣೆ ಮೇರೆ ದರ ಪಟ್ಟಿ ಮುಖಾಂತರ ರೂ. **2,66,400-00** ಗಳಿಗೆ ಮುದ್ರಿಸಿದ ಬಿಲ್ ಬಾಬ್ತಿಗೆ ಒಪ್ಪಿ ಅನುಮೋದನೆ ನೀಡಲಾಯಿತು.<br>1. ಅರ್ಜಿ ಮತ್ತು ಮಾಹಿತಿ ಪುಸ್ತಕದ ಸಂಖ್ಯೆ<br>:18500x11.00= **2,03,500-00**<br>2. ರಸೀದಿ ಪುಸ್ತಕದ ಸಂಖ್ಯೆ:<br>185x60.00=**11,100-00**<br>3. Covers ಸಂಖ್ಯೆ: 18500x2.50= **46,250-00**<br>4. ಸ್ವೀಕೃತಿ ಪತ್ರಗಳ ಸಂಖ್ಯೆ:<br>185x30.00= **5,550-00**<br>**ಒಟ್ಟು ಮೊತ್ತ=2,66,400-00**<br>ಆ) ಮೇಲ್ಕಂಡ ಹುದ್ದೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಗಣಕೀಕೃತ ಗೊಳಿಸಲು ಸಂಸ್ಥೆಯಲ್ಲಿ ಹಾಲಿ ಕೆಲಸ | ಘಟನೋತ್ತರ ಅನುಮತಿ ಪಡೆಯಲಾಗಿದೆ. |

| | | | | | |
|---|---|---|---|---|---|
| | | | | ನಿರ್ವಹಿಸುತ್ತಿರುವ ನೌಕರರು ಅಭ್ಯರ್ಥಿಗಳಾಗಿರುವುದರಿಂದ ಸದರಿಯವರಿಂದ ಈ ಕೆಲಸವನ್ನು ನಿರ್ವಹಿಸುವುದು ಸೂಕ್ತವಿರುವುದಿಲ್ಲವೆಂದು ಪರಿಗಣಿಸಿ ಈ ದಾಖಲೆಗಳನ್ನು ಗಣಕೀಕೃತಗೊಳಿಸಲು Software ಮತ್ತು Manpower ಬಳಕೆಗಾಗಿ ದರ ಪಟ್ಟಿ ಕರೆಯಲಾಗಿದ್ದು ಕೋನಿ ಟೆಕ್ನಾಲಜಿ, ಬೆಂಗಳೂರು ಇವರಿಗೆ 1,38,450-00 ರೂಗಳಿಗೆ ಅವಾರ್ಡ್ ಆಗಿರುವು ದನ್ನು ಒಪ್ಪಿ ಅಂಗೀಕರಿಸಲಾಯಿತು.<br>ಇ) ಅರ್ಜಿಗಳನ್ನು ಪರಿಶೀಲನೆ ಮಾಡಲು ಈ ಹಿಂದೆ ಸರ್ಕಾರದಿಂದ ಅನುಮತಿ ಪಡೆದು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯವರನ್ನು ಉಪಯೋಗಿಸಿಕೊಂಡು ಪರಿಶೀಲನೆ ನಡೆಸಲು ಒಬ್ಬರಿಗೆ 3,000 .00ಸಾವಿರ ರೂಗಳಂತೆ ಮತ್ತು Coordinatorಗೆ 5000.00 ರೂಗಳನ್ನು ನೀಡಲಾಗಿರುತ್ತದೆ. ಆದರೆ ಈ ಬಾರಿ ಅರ್ಜಿಗಳ ಸಂಖ್ಯೆ ಹೆಚ್ಚಾಗಿದ್ದು, ಸುಮಾರು ಎರಡು ತಿಂಗಳ ಕಾಲವಕಾಶ ಬೇಕಾಗುವುದರಿಂದ ಪರಿಶೀಲನೆ ನಡೆಸಲು ಒಬ್ಬರಿಗೆ 5000-00 ಸಾವಿರ ರೂಗಳು ಮತ್ತು Coordinatorಗೆ 7500.00ರೂಗಳನ್ನು ನೀಡುವುದೆಂದು ತೀರ್ಮಾನಿಸಿ ಈ ವೆಚ್ಚವನ್ನು ಅರ್ಜಿ ಮಾರಾಟದಿಂದ ಬಂದ ಬಾಬ್ತಿನಲ್ಲಿ ಪಾವತಿಸುವುದೆಂದು ತೀರ್ಮಾನ ಕೈಗೊಳ್ಳಲಾಯಿತು. | | |
| | | 3(16) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯದ ನಿಯತಕಾಲಿಕೆಗಳು ಮತ್ತು ಪುಸ್ತಕಗಳಿಗೆ ಬೈಡಿಂಗ್ ಮಾಡಿಸುವುದು ಮತ್ತು 500ಬುಕ್ ಸಪೋರ್ಟರ್ಸ್ ಗ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯದ ನಿಯತಕಾಲಿಕೆಗಳು ಮತ್ತು ಪುಸ್ತಕಗಳು ಸುರಕ್ಷಿತ ಬೈಡಿಂಗ್ ಇಲ್ಲದೆ ಹಾಳಾಗುತ್ತಿರುವುದರ ಬಗ್ಗೆ ಚರ್ಚಿಸಿ ಇವುಗಳನ್ನು ಬೈಡಿಂಗ್ ಮಾಡಿಸಲು ಕರೆದಿರುವ ದರಪಟ್ಟಿಯನ್ನು ಒಪ್ಪಿ ಅಂಗೀಕರಿಸಲಾಯಿತು. | ಘಟನೋತ್ತರ ಅನುಮತಿ ಪಡೆಯಲಾಗಿದೆ. | |

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| | | | |
|---|---|---|---|
| | ೆಳನ್ನು ಖರೀದಿಸಿರುವ ಬಗ್ಗೆ. | 500 ಬುಕ್ ಸಪೋರ್ಟ್‌ರ್ಸ್‌ಗಳನ್ನು ಘಟನೋತ್ತರ ಮಂಜೂರಾತಿಯ ನಿರೀಕ್ಷಣೆಯ ಮೇಲೆ ದರಪಟ್ಟಿ ಮುಖಾಂತರರೂ.68,897-00ಗಳಿಗೆ ಖರೀದಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. | |
| 3(17) | ಕಟ್ಟಡದ ಸ್ವಚ್ಛತೆಗಾಗಿ ಲ್ಯಾಡರ್ ಖರೀದಿಸುವ ಬಗ್ಗೆ. | ಕಟ್ಟದ ಮೇಲ್ಛಾವಣಿಗಳು ಎತ್ತರದಲ್ಲಿರುವುದರಿಂದ ಸ್ವಚ್ಛತೆ ಮಾಡಲು ಅನುಕೂಲವಾಗುವಂತೆ ದರಪಟ್ಟಿ ಕರೆದು ಲ್ಯಾಡರ್ ಖರೀದಿಸಲು ತೀರ್ಮಾನಿಸಲಾಯಿತು. | ಬಾತ್ಲಾ ಅಲ್ಯೂಮಿನಿಯಮ್ ಪ್ರೈವೆಟ್ ಲಿಮಿಟೆಡ್ ಇವರಿಂದ 02 ಲ್ಯಾಡರ್ ಖರೀದಿಸಲಾಗಿದ್ದು 81361.0 ರೂಗಳಿಗೆ ಬಿಲ್ ಪಾವತಿ ಮಾಡಲಾಗಿದೆ. |
| 3(18) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಕಳೆ/ಹುಲ್ಲು ಕತ್ತರಿಸುವ ಯಂತ್ರ ಖರೀದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣವನ್ನು ಸ್ವಚ್ಚವಾಗಿಡಲು ಕಳೆ ತೆಗೆಯುವ ಯಂತ್ರವನ್ನು ಖರೀದಿಸುವ ಅವಶ್ಯಕತೆ ಇದೆ. ಇದರ ಅಂದಾಜು ವೆಚ್ಚ 30,000-00 ರೂಗಳಾಗಿದ್ದು ದರಪಟ್ಟಿ ಕರೆದು ಖರೀದಿಸಲು ತೀರ್ಮಾನಿಸಲಾಯಿತು. | ರೈತ ಮಿತ್ರ ಫಾರಂ ಎಕ್ಯೂಪ್‌ಮೆಂಟ್ ಇವರಿಂದ 01 ಕಳೆ ತೆಗೆಯುವ ಯಂತ್ರವನ್ನು ಖರೀದಿಸಲಾಗಿದ್ದು 27,900.00ರೂಗಳಿಗೆ ಬಿಲ್ ಪಾವತಿ ಮಾಡಲಾಗಿದೆ. |
| 3(19) | 2010-11ನೇ ಸಾಲಿಗೆ ಗ್ರಂಥಾಲಯ ವಿಭಾಗಕ್ಕೆ ಗ್ರಂಥಾಲಯ ಪುಸ್ತಕಗಳು ಮತ್ತು ಜರ್ನಲ್ಸ್ ಖರೀದಿಸುವ ಬಗ್ಗೆ. | 2010-11ನೇ ಸಾಲಿಗೆ ಅಗತ್ಯವಿರುವ 2500 ರಿಂದ 3000ಸಂಖ್ಯೆಗಳವರೆಗಿನ ಗ್ರಂಥಾಲಯ ಪುಸ್ತಕಗಳು ಅಗತ್ಯವಿದ್ದು ಇದಕ್ಕೆ ಸುಮಾರು 60 ಲಕ್ಷರೂಗಳ ಅಗತ್ಯವಿರುವುದರ ಬಗ್ಗೆ ಚರ್ಚಿಸಿ ಟೆಂಡರ್ ಕರೆಯಲು ನಿರ್ಣಯ ಕೈಗೊಳ್ಳಲಾಯಿತು ಮತ್ತು ಕೋರಿಕೆಗೆ ಅನುಗುಣವಾಗಿ ಹೆಚ್ಚು ಪುಸ್ತಕಗಳನ್ನು ಸರಬರಾಜು ಮಾಡುವ ಮತ್ತು ಹೆಚ್ಚು ರಿಯಾಯಿತಿ ನೀಡುವ ವಿತರಕರಿಂದ ಪುಸ್ತಕಗಳನ್ನು ಖರೀದಿಸಲು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.<br>2010 ಮತ್ತು 2011ನೇ ಸಾಲಿಗೆ ಎಂ.ಸಿ.ಐ ನಿಯಮಾವಳಿಗಳ ಪ್ರಕಾರ 70 ಇಂಡಿಯನ್ ಜರ್ನಲ್ಸ್ ಮತ್ತು 30 ಫಾರಿನ್ ಜರ್ನಲ್ಸ್ ಅಗತ್ಯವಿರುವ ಬಗ್ಗೆ ಚರ್ಚಿಸಿ | ಗ್ರಂಥಾಲಯ ಪುಸ್ತಕಗಳನ್ನು ಖರೀದಿಸಲು ದಿನಾಂಕ:21-12-2009, ದಿನಪತ್ರಿಕೆಗಳಾದ ದಿ.ಹಿಂದೂ ಮತ್ತು ವಿಜಯ ಕರ್ನಾಟಕ ಹಾಗೂ ಟೆಂಡರ್ ಬುಲೆಟಿನ್ ಸಂಚಿಕೆ 477ದಿನಾಂಕ: 26-12-2009ರಂತೆ ಪ್ರಕಟಿಸಲಾಗಿದೆ. ಈ ಕೆಳಕಂಡಂತೆ ಟೆಂಡರರುದಾರರು ಭಾಗವಹಿಸಿದ್ದರು.<br>1.Vikas Medical Book House, Bangalore.<br>2. Ahuja Book Company, Bangalore.<br>3. Standard Book Company, Bangalore. |

ಒಪ್ಪಲಾಯಿತು. ಇದರ ಖರೀದಿಗೆ ಸುಮಾರು 15.00ಲಕ್ಷ ರೂಗಳ ಅವಶ್ಯಕತೆಯನ್ನು ಸಹ ಚರ್ಚಿಸಿ ನೇರವಾಗಿ ಬೇರೆ ಬೇರೆ ಪ್ರಕಾಶಕರಿಂದ ಪ್ರತ್ಯೇಕವಾಗಿ ಜರ್ನಲ್ಸ್ ಖರೀದಿಸುವುದು ಸೂಕ್ತವಾಗಿರುವುದಿಲ್ಲವೆಂದು ನಿರ್ಣಯಿಸಿ, ಜರ್ನಲ್ಸ್‌ಗಳಿಗೆ ಯಾವುದೇ ರೀತಿ ರಿಯಾಯಿತಿಗಳು ಇಲ್ಲದಿರುವುದರಿಂದ ಈ ಹಿಂದೆ ಸರಬರಾಜು ಮಾಡುತ್ತಿದ್ದ ಪನಿಮಾ ಏಜೆನ್ಸೀಸ್‌ರವರಿಂದ2010-11ನೇ ಸಾಲಿನ ಜರ್ನಲ್ಸ್, ನವೀಕರಣ ಮಾಡಿಸಲು ತೀರ್ಮಾನ ಕೈಗೊಳ್ಳಲಾಯಿತು.

4. Sapna Book House, Bangalore.

ಟೆಂಡರುದಾರರು ನೀಡಿರುವ ರಿಯಾಯಿತಿ ಆಧಾರದ ಈ ಕೆಳಕಂಡಂತೆ ಸರಬರಾಜು ಆದೇಶ ನೀಡಲಾಗಿದೆ.

| Description | Order Placed and Discount | Value |
|---|---|---|
| 1.Vikas Medical Book House, Bangalore. | 1471 No. & 30% | 31,25,059.28 |
| 2. Ahuja Book Company, Bangalore. | 395 No. 25% | 9,14,113.83 |
| 3. Standard Book Company, Bangalore. | 101 No. 25% | 3,76,222.00 |
| 4.Sapna Book House, Bangalore. | 177 No. 25% | 108484.00 |
| Total | 2144 No. | 45,23,879.00 |

ಮೇಲ್ಕಂಡಂತೆ ಸರಬರಾಜು ಆದೇಶ ನೀಡಿದ್ದು ಇವುಗಳಲ್ಲಿ 1359 ಪುಸ್ತಕಗಳು ಸರಬರಾಜು ಆಗಿದ್ದು ಉಳಿದ ಪುಸ್ತಕಗಳು ಸರಬರಾಜು ಆಗಬೇಕಾಗಿರುತ್ತದೆ. ಬಿಲ್ ಪಾವತಿಯಾಗಿರುವುದಿಲ್ಲ.

Panima Subscription Agency, Bangalore ರವರಿಗೆ 70 Indian ಜರ್ನಲ್ಸ್ ಹಾಗೂ 31 Foreign ಜರ್ನಲ್ಸ್‌ನನ್ನು ಖರೀದಿಸಲು ಆದೇಶ ನೀಡಲಾಗಿದ್ದು, ಅವುಗಳ ಒಟ್ಟು ಮೊತ್ತ ರೂ. 14,08,754.00

ನಿಯತಕಾಲಿಕೆಗಳ ಸರಬರಾಜು ನವೀಕರಣ

| | | | | |
|---|---|---|---|---|
| | | | | ಗೊಂಡಿದ್ದು ಹೊಸ ಜರ್ನಲ್ಸ್ ಸರಬರಾಜು ಆಗುತ್ತಿದ್ದು ಬಿಲ್ ಪಾವತಿಸಲು ಬಾಕಿ ಇರುತ್ತದೆ. |
| | 3(20) | ಅಧ್ಯಕ್ಷರ ಅಪ್ಪಣೆ ಮೇರೆ ಇತರೆ ವಿಷಯಗಳು. | 1. BARC, Trombay, Mumbai ರವರಿಂದ ರೇಡಿಯೋಥರಪಿ ಘಟಕ ಪ್ರಾರಂಭಿಸಲು 175.00 ಲಕ್ಷ ಅನುದಾನ ಬಂದಿರುವುದನ್ನು ಚರ್ಚಿಸಿ ಅಂಗೀಕರಿಸಲಾಯಿತು. ಈ ಅನುದಾನವನ್ನು BARCರವರ ಮಾರ್ಗಸೂಚಿಯಂತೆ ಬಳಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು. | 1. BARC, Trombay, Mumbai ರವರಿಂದ ರೇಡಿಯೋಥರಪಿ ಘಟಕ ಪ್ರಾರಂಭಿಸುವ ವಿಷಯದ ಬಗ್ಗೆ ಅಜೆಂಡಾ ಕ್ರಮ ಸಂಖ್ಯೆ: 08ರಲ್ಲಿ ಮಂಡಿಸಿದೆ. |
| 4 | 2008-09ನೇ ಸಾಲಿನ ಸಂಸ್ಥೆಯ ಆಡಿಟ್ ವರದಿಯನ್ನು ಓದಿ ಅಂಗೀಕರಿಸುವುದು. | | 2008-09ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಸಂಸ್ಥೆಯ ಸನ್ನದು ಲೆಕ್ಕಿಗರಾದ (ಚಾರ್ಟ್‌ಡ್ ಅಕೌಂಟೆಟ್) ಶ್ರೀ. ಹೆಚ್.ಡಿ. ಅಭಿನಂದನ್ ಮತ್ತು ಕಂಪನಿಯವರು ಸಲ್ಲಿಸಿದ್ದ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯು 2008-09ನೇ ಸಾಲಿನ ಅಡಿಟ್ ವರದಿಯನ್ನು ಸುದೀರ್ಘವಾಗಿ ಚರ್ಚಿಸಿ ಅಂಗೀಕರಿಸಲಾಯಿತು. | |
| 5 | ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ Digital Library ಸೌಲಭ್ಯವನ್ನು ಅಳವಡಿಸುವ ಬಗ್ಗೆ. | | ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ Digital Library ಸೌಲಭ್ಯವನ್ನು ಅಳವಡಿಸಲು ಕರೆದಿರುವ ಟೆಂಡರ್ ಬಗ್ಗೆ ಚರ್ಚಿಸಲಾಯಿತು.ಕಡಿಮೆ ದರ ಸೂಚಿಸಿರುವ ಕೋನಿ ಟೆಕ್ನಾಲಜಿಸ್, ಬೆಂಗಳೂರುರವರು ಒಟ್ಟು 25,46,661.00 ರೂಗಳನ್ನು ನಮೂದಿಸಿದ್ದು ಇದರಲ್ಲಿ ಸಿವಿಲ್ ಕಾಮಗಾರಿಯ ವೆಚ್ಚ 17,43,738.00 ರೂಗಳಾಗಿರುವುದರಿಂದ ಈ ವಿಷಯವನ್ನು ಸಿವಿಲ್ ಕಮಿಟಿಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. | |
| 6 | ಸಂಸ್ಥೆಯ ಮಿಣಿ ಜೀವ ಶಾಸ್ತ್ರ ವಿಭಾಗಕ್ಕೆ ಖರೀದಿಸಲಾಗಿದ್ದ ಉಪಕರಣಗಳನ್ನು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು ಇಲ್ಲಿಗೆ ವರ್ಗಾಯಿಸುವ ಬಗ್ಗೆ. | | ಮಿಣಿ ಜೀವ ಶಾಸ್ತ್ರ ವಿಭಾಗದಲ್ಲಿರುವ ಕೆಲವೊಂದು ಉಪಕರಣಗಳು ಬೆಳವಣಿಗೆ ಹಂತದಲ್ಲಿರುವ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅವಶ್ಯಕತೆ ಇರುವುದಿಲ್ಲ ಈ ಉಪಕರಣಗಳನ್ನು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು ಇಲ್ಲಿಗೆ ವರ್ಗಾಯಿಸುವಂತೆ ದಿನಾಂಕ: 18-12-2009ರಂದು ನಡೆದ ಇಲಾಖೆಯ ಮಾಸಿಕ ಪರಿಶೀಲನ ಸಭೆಯಲ್ಲಿ ಸೂಚಿಸಿರುವ ಬಗ್ಗೆ ಚರ್ಚಿಸಲಾಯಿತು ಈ ವಿಷಯದ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಚರ್ಚಿಸುವುದೆಂದು ತೀರ್ಮಾನಿಸಲಾಯಿತು.<br>ಮಿಣಿ ಜೀವ ಶಾಸ್ತ್ರ ವಿಭಾಗಕ್ಕೆ ಅಗತ್ಯವಿಲ್ಲದ ಮತ್ತು ಆರ್ಥಿಕವಾಗಿ ಸಂಸ್ಥೆಗೆ ಅನವಶ್ಯಕ ಹೊರೆಯಾಗುವಂತಹ ಉಪಕರಣಗಳನ್ನು ಖರೀದಿಸಲು ಶಿಫಾರಸ್ಸು ಮಾಡಿದ್ದ ವಿಭಾಗದ ಮುಖ್ಯಸ್ಥರಾದ ಡಾ. ಡಿ.ಟಿ. ವೆಂಕಟೇಶ್ ಇವರಿಗೆ ಷೋಕಾಸ್ ನೋಟೀಸ್ ಜಾರಿಗೊಳಿಸುವಂತೆ ಮತ್ತು ಇದರ ಬಗ್ಗೆ ಸೂಕ್ತ | |

| | | |
|---|---|---|
| | | ಅಧಿಕಾರಿಗಳಿಂದ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 7 | ಸಂಸ್ಥೆಯ Dialysis ಚಿಕಿತ್ಸಾ ವಿಭಾಗಕ್ಕೆ ಹೆಚ್ಚುವರಿಯಾಗಿ 06 ಡಯಾಲಿಸಿಸ್ ಯಂತ್ರವನ್ನು ಖರೀದಿಸಿ ಅಳವಡಿಸುವ ಬಗ್ಗೆ. | ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆಗೆ ಹೆಚ್ಚುವರಿಯಾಗಿ ಅಗತ್ಯವಿರುವ 06 ಡಯಾಲಿಸಿಸ್ ಯಂತ್ರಗಳ ಅಳವಡಿಕೆ ಬಗ್ಗೆ ಚರ್ಚಿಸಲಾಯಿತು. ಮೂತ್ರಕೋಶ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಿ ಈ ಹಿಂದೆ ಖರೀದಿಸಲಾಗಿದ್ದ B-Brawn ಕಂಪನಿಯವರಿಂದ ಅದೇ ಯಂತ್ರಗಳನ್ನು ಹಿಂದಿನ ಟೆಂಡರ್ ಆಧಾರದಲ್ಲಿ (ಟೆಂಡರ್ ಅಧಿಸೂಚನೆ ಸಂಖ್ಯೆ:HIMS/TS/Eqp/22/2009-10) ಖರೀದಿಸಲು ತೀರ್ಮಾನಿಸಲಾಯಿತು. ಇದಕ್ಕೆ ಸಂಬಂಧಪಟ್ಟ ಸಿವಿಲ್ ಮತ್ತು ಪ್ಲಂಬಿಂಗ್ ಕಾಮಗಾರಿಗಳನ್ನು ಈ ಹಿಂದೆ ಮಾಡಿಸಿದಂತೆ ಕೆ.ಹೆಚ್.ಎಸ್.ಡಿ.ಪಿ ಇಲಾಖೆಯ ಅನುಮೋದನೆಯೊಂದಿಗೆ ಮಾಡಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು. |
| 8 | Baba Atomic Research Centre, Mumbai ಸಂಸ್ಥೆಯಿಂದ ಬಂದಿರುವ ದೇಣಿಗೆಯಲ್ಲಿ ಉದ್ದೇಶಿತ ಕಟ್ಟಡ ನಿರ್ಮಿಸುವ ಬಗ್ಗೆ. | Baba Atomic Research Centre, Mumbaiರವರು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ ಕೋಬಾಲ್ಟ್ ಥೆರಪಿ ಚಿಕಿತ್ಸೆಯನ್ನು ಒದಗಿಸುವ ಉದ್ದೇಶದಿಂದ 175 ಲಕ್ಷರೂಗಳನ್ನು ಅನುದಾನವಾಗಿ ಸಂಸ್ಥೆಗೆ ನೀಡಿರುವುದರ ಬಗ್ಗೆ ಈ ಹಿಂದೆ ಚರ್ಚಿಸಲಾಗಿರುತ್ತದೆ. Baba Atomic Research Centre, Mumbai ರವರು ಕೋಬಾಲ್ಟ್ ಥೆರಪಿ ಯಂತ್ರವನ್ನು ಸ್ವದೇಶಿ ನಿರ್ಮಿತ ಸಂಸ್ಥೆಯಾಗಿರುವ Bhabhatron-II ಇವರಿಂದಲೇ ಖರೀದಿಸಿ ಅಳವಡಿಸಬೇಕೆಂದು ಸೂಚಿಸಿರುವದರಿಂದ ಸದರಿ ಸಂಸ್ಥೆಯವರಿಂದಲೇ ಖರೀದಿಸಿ ಅಳವಸಿಡುವುದೆಂದು ತೀರ್ಮಾನಿಸಲಾಯಿತು. ಸೂಚಿಸಿರುವ ಅನ್ವಯ ಇದರನ್ವಯ ಉದ್ದೇಶಿತ ಕಟ್ಟಡವನ್ನು ನಿರ್ಮಿಸಲು ರೂ. 38,72,485.00 ಲಕ್ಷರೂಗಳು ಮತ್ತು ಯಂತ್ರದ ಖರೀದಿಗೆ ರೂ 1,65,41,470.00 ಗಳು ಒಟ್ಟು ರೂ.2,07,44,855.00ವೆಚ್ಚಕ್ಕೆ ಅನುಮೋದನೆ ನೀಡಿಲಾಯಿತು. ಕೊರತೆ ಇರುವ ಅನುದಾನ ರೂ. 32,44,855.00ಗಳನ್ನು ಸಂಸ್ಥೆಗೆ ಲೆಕ್ಕ ಶೀರ್ಷಿಕೆ 4210ಅಡಿಯಲ್ಲಿ ಬಿಡುಗಡೆಯಾಗುವ ಅನುದಾನವನ್ನು ಉಪಯೋಗಿಸಿಕೊಂಡು ಉದ್ದೇಶಿತ ಕಾಮಗಾರಿಯನ್ನು ಪೂರ್ಣಗೊಳಿಸುವುದೆಂದು ತೀರ್ಮಾನಿಸಲಾಯಿತು. |
| 9 | ಜಿಲ್ಲಾಆಸ್ಪತ್ರೆಯ 2010-11ನೇ ಸಾಲಿನ ಅನುದಾನವನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನಿರ್ವಹಿಸುವ ಬಗ್ಗೆ ಮತ್ತು 2010-11ನೇ ಸಾಲಿನ ಆಯ-ವ್ಯಯ ಪತ್ರದ ಅನುಮೋದನೆ. | ಅ) ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆಯನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿಲೀನಗೊಳಿಸಿ ಸದರಿ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಅನುದಾನವನ್ನು 2010-11ನೇ ಸಾಲಿನ ಆಯ-ವ್ಯಯದಲ್ಲಿ ಸೇರಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಅನುದಾನ ಮತ್ತು ವೈದ್ಯಕೀಯ ಕಾಲೇಜಿಗೆ ಅಗತ್ಯವಿರುವ ಅನುದಾನವನ್ನು ಕ್ರೋಢೀಕರಿಸಿ ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಸರ್ಕಾರದಿಂದ ಅನುದಾನವನ್ನು ಪಡೆದು ಉಪಯೋಗಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು.<br>2010-11ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಮತ್ತು ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಈ ಕೆಳಕಂಡ ಆಯ-ವ್ಯಯ ಮುಂಗಡ ಪತ್ರವನ್ನು ಓದಿ ಅಂಗೀಕರಿಸಲಾಯಿತು. |

## HASSAN INSTITUTE OF MEDICAL SCIENCES, HASSAN

### STATEMENT SHOWING THE BUDGET REQUIREMENT FOR THE YEAR 2010-11

| Receipts | | | | Payments | | | |
|---|---|---|---|---|---|---|---|
| Sl. No. | Particulars | Total | Grant Total (Rs. In Lakhs) | Sl. NO. | Particulars | Total | Grand Total (Rs.in lakhs) |
| **A** | **Salary and Office Expenditure:(2210-05-105-1-40-101) Plan** | | | | | - | |
| 1 | By opening Balance | 0.00 | | 1 | Pay and Allowance of Teaching Staff | 1024.00 | |
| 2 | Grant in aid from Government of Karnataka | 1000.00 | | 2 | Pay and Allowance of Non-Teaching Staff | 742.00 | |
| 3 | Additionality Expected from Government of Karnataka | 1035.00 | | 3 | Pay of Out Sourcing and Networking maintenance Contract | 124.00 | |
| | | | | 4 | Leave Encashment | 50.00 | |
| | | | | 5 | Medical Reimbursement | 30.00 | |
| | | | | 6 | Contingency( as per G.O.) | 65.00 | |
| | **Total** | **2035.00** | **2035.00** | | **Total** | **2035.00** | **2035.00** |
| **B** | **Construction and Equipments(Head of Account :(4210-03-105-1-02-386) Plan** | | | | | | |
| 1 | By opening Balance | 24.00 | | 1 | III-Phase Construction | 500.00 | |
| 2 | Grant in aid from Government of Karnataka | 1000.00 | | 2 | Equipments and Furniture for 750 bedded New Hospital | 500.00 | |
| 3 | Additionality Expected from Government of Karnataka | 811.00 | | 3 | Equipments (as per G.O) | 600.00 | |
| | | | | 4 | Building and Maintenance (as per G.O) | 90.00 | |
| | | | | 5 | Electricity and Water (as per G.O) | 90.00 | |
| | | | | 6 | Library Books (as per G.O.) | 40.00 | |
| | | | | 7 | Journals | 15.00 | |
| | **Total** | **1835.00** | **1835.00** | | **Total** | **1835.00** | **1835.00** |
| **C** | **Teaching Hospital Budget:(2210-05-105-1-40-101) Non-Plan** | | | | | | |
| 1 | Grant in aid from Government of Karnataka | 766.00 | | 1 | Pay and Allowance of Teaching Staff | 450.00 | |
| 2 | Additionality Expected from Government of Karnataka | 134.00 | | 2 | Medicines | 200.00 | |
| | | | | 3 | Food for Patients | 75.00 | |
| | | | | 4 | Machinery and Equipments | 45.00 | |
| | | | | 5 | Materials and Supplies | 70.00 | |
| | | | | 5 | Office Expenditure | 35.00 | |
| | | | | 6 | Others | 25.00 | |
| | **Total** | **900.00** | **900.00** | | **Total** | **900.00** | **900.00** |

| | | | | | | | |
|---|---|---|---|---|---|---|---|
| **D** | **Teaching Hospital Users Fund Budget:** | | | | | | |
| 1 | Revenue | **132.00** | | 1 | Purchase of Medicines | **100.00** | |
| | | | | 2 | Investigations related to poor patients | **5.00** | |
| | | | | 3 | FOL for Ambulance and others | **5.00** | |
| | | | | 4 | Repairs and Maintenance of Hospital | **15.00** | |
| | | | | 5 | Others | **7.00** | |
| | **Total** | **132.00** | **132.00** | **3** | **Total** | **132.00** | **132.00** |
| **Grand Total** | | | **4902.00** | | **Grand Total** | | **4902.00** |

**ಅ) ಆಹಾರ ಪದಾರ್ಥಗಳ ಸರಬರಾಜಿನ ಟೆಂಡರ್‌ನ ಅನುಮೋದನೆ ಬಗ್ಗೆ :**

ಬೋಧಕ ಆಸ್ಪತ್ರೆಯ ಆಹಾರ ಪದಾರ್ಥಗಳ ಸರಬರಾಜಿನ ಟೆಂಡರ್‌ಗೆ ಸಂಬಂಧಿಸಿದಂತೆ, ದಿನಾಂಕ: 16-12-2009ರಂದು ಉದಯವಾಣಿ ಮತ್ತು ಪ್ರತಿನಿಧಿ ದಿನ ಪತ್ರಿಕೆಯಲ್ಲಿ ಟೆಂಡರ್ ಜಾಹೀರಾತು ನೀಡಿದ್ದು ಕಡಿಮೆ ದರ ನೀಡಿರುವ ಜಲಜಾಕ್ಷಿ ಗುಣಶ್ರೀ ಟ್ರೇಡರ್ಸ್, ಹಾಸನರವರ ದರ ಪಟ್ಟಿಯು ಮಾರುಕಟ್ಟೆ ಬೆಲೆಗೆ ಹೊಂದಾಣಿಕೆ ಇರುವುದರಿಂದ ಸದರಿಯವರಿಗೆ ಸರಬರಾಜು ಆದೇಶ ನೀಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.

**ಇ) ಆಸ್ಪತ್ರೆಯ ಅವಶ್ಯಕ ವಸ್ತುಗಳ ಸರಬರಾಜು ಟೆಂಡರ್‌ನ ಅನುಮೋದನೆ ಬಗ್ಗೆ:**

ಬೋಧಕ ಆಸ್ಪತ್ರೆಯ ಅವಶ್ಯಕ ವಸ್ತುಗಳ ಸರಬರಾಜು ಟೆಂಡರ್‌ಗೆ ಸಂಬಂಧಿಸಿದಂತೆ ದಿನಾಂಕ: 16-12-2009ರಂದು ಉದಯವಾಣಿ ಮತ್ತು ಪ್ರತಿನಿಧಿ ದಿನ ಪತ್ರಿಕೆಯಲ್ಲಿ ಟೆಂಡರ್ ಜಾಹೀರಾತು ನೀಡಿದ್ದು ಕಡಿಮೆ ದರ ನೀಡಿರುವ ವ್ಯವಸ್ಥಾಪಕರು, KSCC, ಹಾಸನರವರ ದರ ಪಟ್ಟಿಯು ಮಾರುಕಟ್ಟೆ ಬೆಲೆಗೆ ಹೊಂದಾಣಿಕೆ ಇರುವುದರಿಂದ ಸದರಿಯವರಿಗೆ ಸರಬರಾಜು ಆದೇಶ ನೀಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.

**ಈ) ಶೇ100% ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜಿನ ಟೆಂಡರ್‌ನ ಅನುಮೋದನೆ ಬಗ್ಗೆ:**

ಬೋಧಕ ಆಸ್ಪತ್ರೆಯ ಶೇ 100% ಭಾಗದ ಪ್ರಥಮ ದರ್ಜೆ ಬ್ರೆಡ್ ಸರಬರಾಜು ಟೆಂಡರ್‌ಗೆ ಸಂಬಂಧಿಸಿದಂತೆ ದಿನಾಂಕ: 16-12-2009ರಂದು ಉದಯವಾಣಿ ಮತ್ತು ಪ್ರತಿನಿಧಿ ದಿನ ಪತ್ರಿಕೆಯಲ್ಲಿ ಟೆಂಡರ್ ಜಾಹೀರಾತು ನೀಡಿದ್ದು ಕಡಿಮೆ ದರ ನೀಡಿರುವ ಬಿ.ಎ. ಲಿಂಗೇಶ್, ಹಾಸನರವರ ದರ ಪಟ್ಟಿಯು ಮಾರುಕಟ್ಟೆ ಬೆಲೆಗೆ ಹೊಂದಾಣಿಕೆ ಇರುವುದರಿಂದ ಸದರಿಯವರಿಗೆ ಸರಬರಾಜು ಆದೇಶ ನೀಡಲು ಕ್ರಮಕೈಗೊಳ್ಳುವಂತೆ

| | | |
|---|---|---|
| | | ನಿರ್ದೇಶಕರಿಗೆ ಸೂಚಿಸಲಾಯಿತು.<br>**<u>ಈ) ಆಕ್ಸಿಜನ್ , ನೈಟ್ರಸ್ ಆಕ್ಸೈಡ್ ಕಾರ್ಬನ್ ಡೈ ಆಕ್ಸೈಡ್ ಹಾಗೂ ದ್ರವೀಕೃತ ಆಕ್ಸಿಜನ್ ವಿವರ:</u>**<br>ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಆಕ್ಸಿಜನ್, ನೈಟ್ರಸ್ ಆಕ್ಸೈಡ್ ಕಾರ್ಬನ್ ಡೈ ಆಕ್ಸೈಡ್ ಹಾಗೂ ದ್ರವೀಕೃತ ಆಕ್ಸಿಜನ್ ಸರಬರಾಜಿಗಾಗಿ ದಿನಾಂಕ: 23-03-2010ರಂದು ಜನತಾಮಾಧ್ಯಮ ದಿನ ಪತ್ರಿಕೆಯಲ್ಲಿ ಟೆಂಡರ್ ಜಾಹೀರಾತು ನೀಡಿದ್ದು ಸರಬರಾಜು ಆದೇಶ ನೀಡಲು ಕ್ರಮ ಕೈಗೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು.<br>**<u>ಉ) ಔಷಧಿ ವಿವರ:</u>**<br>ಬೋಧಕ ಆಸ್ಪತ್ರೆಯ ಔಷಧಿ ಖರೀದಿಗಾಗಿ ವಾರ್ಷಿಕ ಸುಮಾರು 250.00 ಲಕ್ಷ ಅನುದಾನದ ಅವಶ್ಯಕತೆ ಇದ್ದು 2010-11ನೇ ಸಾಲಿನ ಅನುದಾನದಲ್ಲಿ ಹಿಮ್ಸ್, ಸಂಸ್ಥೆಯ ಮೂಲಕ ಟೆಂಡರ್ ಕರೆದು ಔಷಧಿ ಖರೀದಿಸಲು ಕ್ರಮಕೈಗೊಳ್ಳುವುದರ ಬಗ್ಗೆ ಒಪ್ಪಿ ಅಂಗೀಕರಿಸಲಾಯಿತು. ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪಾರದರ್ಶನ ನಿಯಮದಡಿ ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಮತ್ತು ರಾಜ್ಯ ಮತ್ತು ಕೇಂದ್ರ ರೇಟ್ ಕಾಂಟ್ರಾಕ್ಟ್ ಲಿಸ್ಟ್‌ನಲ್ಲಿ ಒಪ್ಪಿಗೆ ಆಗಿರುವ ಕಂಪನಿಗಳಿಂದ ಔಷಧಿಗಳನ್ನು ಖರೀದಿಸಲು ಅನುಮೋದನೆ ನೀಡಲಾಯಿತು. |
| 10 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕೇತರ ಸಿಬ್ಬಂದಿ ಪ್ರಕಟಣೆ ಸಂಖ್ಯೆ: ಹಿಮ್ಸ್ ಸಿ(2)/06/2009-10, ದಿನಾಂಕ 09-09-2009ಕ್ಕೆ ಸಂಬಂಧಿಸಿದಂತೆ ಆರ್ಥಿಕ ಸಮಿತಿಯಿಂದ ಅನುಮೋದನೆ ಪಡೆಯುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕೇತರ ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳಲು ದಿನಾಂಕ:04-08-2009ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಪತ್ರಿಕಾ ಪ್ರಕಟಣೆ ಸಂಖ್ಯೆ: ಹಿಮ್ಸ್ ಸಿ(2)/06/2009-10, ದಿನಾಂಕ 09-09-2009ರಂದು ನೀಡಿರುವ 307 ಬೋಧಕೇತರ ಸಿಬ್ಬಂದಿ ನೇಮಕಾತಿ ಪ್ರಕಟಣೆಯ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸರ್ಕಾರದ ಆದೇಶ ಸಂಖ್ಯೆ: ಆಕುಕ 266 ಎಂಪಿಎಸ್ 2006, ದಿನಾಂಕ: 12-09-2006ರಲ್ಲಿ ಒಟ್ಟು 740 ಹುದ್ದೆಗಳು ಮಂಜೂರಾಗಿದ್ದು ಇದರಲ್ಲಿ 518 ಹುದ್ದೆಗಳು ಬೋಧಕೇತರ ಹುದ್ದೆಗಳಾಗಿದ್ದು ಪ್ರಸ್ತುತ ಸಂಸ್ಥೆಗೆ ಅವಶ್ಯಕವಿರುವ 307ಹುದ್ದೆಗಳು ಅವಶ್ಯಕತೆ ಇದ್ದು ಈ ಹುದ್ದೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 1309 ವೆಚ್ಚ -5/2006, ದಿನಾಂಕ: 02-08-2006ರಲ್ಲಿ ನೀಡಿದ ಅಭಿಪ್ರಾಯದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 266 ಎಂಪಿಎಸ್ 2006, ಬೆಂಗಳೂರು, ದಿನಾಂಕ:07-09-2006ರ ಆದೇಶದಲ್ಲಿ ಸಿಬ್ಬಂದಿ ಪ್ರಮಾಣ ಮತ್ತು ಅಗತ್ಯವಿರುವ ವಾರ್ಷಿಕ ವೆಚ್ಚಕ್ಕೆ ಅನುಮೋದನೆ ಇರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಈ ನೇಮಕಾತಿ ಪ್ರಕ್ರಿಯೆಯ ಸಂದರ್ಶನದಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳ ಸಿಬ್ಬಂದಿ ವೇತನದ ವೆಚ್ಚಕ್ಕೆ ಅನುಮೋದನೆ ನೀಡಲಾಯಿತು. |

| | | |
|---|---|---|
| 11 | ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆಗೆ ಜನರೇಟರ್ ಅಳವಡಿಸಲು ಟೆಂಡರ್ ಕರೆದಿರುವ ಬಗ್ಗೆ. | ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಹಾಲಿ ಇರುವ ಜನರೇಟರ್ ತುಂಬಾ ಹಳೆಯದಾಗಿರುವುದರಿಂದ ಹೊಸದಾಗಿ 160 ಕೆ.ವಿ.ಎ ಸಾಮರ್ಥ್ಯದ ಹೊಸ ಜನರೇಟರ್ ಅಳವಡಿಸಬೇಕಾಗಿರುತ್ತದೆ ಈ ವಿಷಯದ ಬಗ್ಗೆ. ದಿನಾಂಕ: 04-08-2009ರಂದು ನಡೆದ ಆಡಳಿತ ಮಂಡಳಿಯ ಅಜೆಂಡಾ ಕ್ರಮ ಸಂಖ್ಯೆ: 15(ಆ)ರಲ್ಲಿ ಪಾರದರ್ಶಕ ನಿಯಮವನ್ನು ಅನುಸರಿಸಿ 20.00ಲಕ್ಷರೂಗಳಿಗೆ ಒಳಪಟ್ಟು ಅಗತ್ಯ ಉಪಕರಣಗಳನ್ನು ಖರೀದಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳು ಅಲ್ಪಾವಧಿ ಟೆಂಡರ್ ಮೂಲಕ ಜನರೇಟರ್ ಖರೀದಿಸಲು ಅನುಮೋದಿಸಿದ್ದು ಇದರನ್ವಯ ಪತ್ರಿಕಾ ಜಾಹೀರಾತು ನೀಡಿ ಟೆಂಡರ್ ಕರೆಯಲಾಗಿದ್ದು ಕೆಳಕಂಡ ಸರಬರಾಜುದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.<br>1. ರಂಗನಾಥ ಸ್ವಾಮಿ ಎಂಜಿನಿಯರಿಂಗ್ ವರ್ಕ್ಸ್, ಹಾಸನ.<br>2. ಪವರ್ ಗ್ರೀನ್ ಸರ್ವೀಸಸ್, ಹಾಸನ<br>3. ಹೊಯ್ಸಳ ಎಂಜಿನಿಯರಿಂಗ್ ವರ್ಕ್ಸ್, ಹಾಸನ.<br>ಇವುಗಳಲ್ಲಿ ಪವರ್ ಗ್ರೀನ್ ಸರ್ವೀಸಸ್, ಹಾಸನ ರವರು 9,54,300.00ರೂಗಳಿಗೆ ಸಲ್ಲಿಸಿದ್ದು ಈ ದರವು ಕಡಿಮೆ ದರವಾಗಿದ್ದು ಮಾರುಕಟ್ಟೆ ದರದ ಸಮೀಪಕ್ಕೆ ಹೊಂದಾಣಿಕೆಯಾಗಿರುತ್ತದೆ. ಆದುದರಿಂದ ಸದರಿ ಸಂಸ್ಥೆಯವರಿಗೆ ಸರಬರಾಜು ಆದೇಶ ನೀಡುವುದನ್ನು ಅನುಮೋದಿಸಲಾಯಿತು. |
| 12 | ಸಂಸ್ಥೆಗೆ Hypochlorite Plant ಅಳವಡಿಸಿರುವ ಬಗ್ಗೆ. | ಸಂಸ್ಥೆಗೆ ETP Plant ಅಳವಡಿಕೆಯ ಸಿವಿಲ್ ಕಾಮಗಾರಿಗೆ ಮೆ. ಗ್ಲೋಬಲ್ ಎನ್ ವೈರ್ನಮೆಂಟ್ ಸಿಸ್ಟಂ, ಇವರಿಗೆ ತುಂಡುಗುತ್ತಿಗೆ ಆಧಾರದ ಮೇರೆಗೆ ಗುತ್ತಿಗೆ ನೀಡಲಾಗಿರುವ ಅಂದಾಜು ವೆಚ್ಚ ಸುಮಾರು70,000.00ರೂಗಳಿಗೆ KHSDRP ಇಲಾಖೆಯವರು ದೃಢೀಕರಿಸಿರುವುದನ್ನು ಮತ್ತು ETP Plant ಅಳವಡಿಕೆಗೆ ಸಂಬಂಧಿಸಿದ ಉಪಕರಣಗಳನ್ನು ದರ ಪಟ್ಟಿ ಮೂಲಕ ಮೆ.ಗ್ಲೋಬಲ್ ಎನ್ವರ್‌ಮೆಂಟ್ ಸಿಸ್ಟಂರವರಿಂದ 98,194.00 ರೂಗಳಿಗೆ ಅಳವಡಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.<br>ಮೂರನೇ ಹಂತದ ಕಾಮಗಾರಿಯಲ್ಲಿ ಶಾಶ್ವತವಾಗಿ ETP Plant ಅಳವಡಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 13 | ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆಯ ನವೀಕರಣದ ಬಗ್ಗೆ. | ಸಾರ್ವಜನಿಕರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿ ಅತ್ಯಾಧುನಿಕ ಉಪಕರಣಗಳನ್ನು ಅಳವಡಿಸಿ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಹೊಸ ಕಟ್ಟಡ ನಿರ್ಮಾಣವಾಗುತ್ತಿದ್ದು ಕಾಮಗಾರಿಯು ಅತಿ ಶೀಘ್ರದಲ್ಲಿ ಮುಗಿಯುವ ಹಂತದಲ್ಲಿರುತ್ತದೆ ಎಂದು ಸಂಸ್ಥೆಯ ನಿರ್ದೇಶಕರು ಸಭೆಗೆ ವಿವರಿಸಿದರು ಹಾಲಿ ಇರುವ ಜಿಲ್ಲಾ ಆಸ್ಪತ್ರೆಯು ಹಳೆಯ ಕಟ್ಟಡವಾಗಿದ್ದು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಕೆಲವೊಂದು ಮಾರ್ಪಾಟುಗಳನ್ನು ಮಾಡಿ ಕೆಲವೊಂದು ಭಾಗವನ್ನು ಕೆಡವಿ ಉಳಿದ ಭಾಗಗಳನ್ನು ಮರು ವಿನ್ಯಾಸಗೊಳಿಸಲು ಲೋಕೋಪಯೋಗಿಇಲಾಖೆ ಹಾಸನ ಜಿಲ್ಲೆ, ಹಾಸನ ಇವರು ಸಲ್ಲಿಸಿರುವ ಅಂದಾಜು ವೆಚ್ಚ 4500.00ಲಕ್ಷರೂಗಳ ಬಗ್ಗೆ ಚರ್ಚಿಸಲಾಯಿತು. ಈ ವಿಷಯವನ್ನು Civil Committee ಸಭೆಯಲ್ಲಿ ಮಂಡಿಸಿ ವಿವರವಾದ ನಕ್ಷೆ |

| | | |
|---|---|---|
| | | ಮತ್ತು ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆದು ನಂತರ ಸರ್ಕಾರಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ಪಡೆಯುವುದೆಂದು ತೀರ್ಮಾನ ಕೈಗೊಳ್ಳಲಾಯಿತು. |
| 14 | ನೂತನ ಆಸ್ಪತ್ರೆಗೆ ಅವಶ್ಯಕವಿರುವ ಉಪಕರಣ ಮತ್ತು ಪೀಠೋಪಕರಣ ಖರೀದಿಗೆ ಟೆಂಡರ್ ಕರೆದಿರುವ ಬಗ್ಗೆ. | ನೂತನ ಆಸ್ಪತ್ರೆಯ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು ಅತಿ ಶೀಘ್ರದಲ್ಲಿ ಸಂಸ್ಥೆಗೆ ಹಸ್ತಾಂತರವಾಗುತ್ತಿರುವುದರಿಂದ ಈ ಹೊಸ ಕಟ್ಟಡಕ್ಕೆ ಅಗತ್ಯವಿರುವ ಉಪಕರಣ ಪೀಠೋಪಕರಣಗಳು ಇತರೆ ಸಾಮಾಗ್ರಿಗಳನ್ನು ಖರೀದಿಸಲು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದಿರುವುದರಿಂದ ಈ ಎಲ್ಲಾ ಉದ್ದೇಶಿತ ಸೌಕರ್ಯಗಳ ಅಳವಡಿಕೆಗೆ ಅಗತ್ಯವಿರುವ ಸುಮಾರು 1300ರಿಂದ 1400ಲಕ್ಷಗಳ ಅನುದಾನಕ್ಕೆ ಅನುಮೋದನೆ ನೀಡಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 15 | ಸಂಸ್ಥೆಯ ಲಿಫ್ಟ್‌ಗಳಿಗೆ AMC ಮಾಡಿಸುವ ಬಗ್ಗೆ. | ಸಂಸ್ಥೆಯ ಕಾಲೇಜು ಕಟ್ಟಡ ವೈದ್ಯರುಗಳ ವಸತಿಗೃಹ ಮತ್ತು ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳ ಲಿಫ್ಟ್ ವಾರಂಟಿ ಮುಗಿದ ಕೂಡಲೇ ಎ.ಎಮ್.ಸಿ. ಮಾಡಿಸಲು ಅನುಮೋದನೆ ನೀಡಲಾಯಿತು. |
| 16 | 37 ಟ್ರೈನಿಂಗ್ ಸ್ಟಾಫ್ ನರ್ಸ್‌ಗಳ ಸೇವೆಯನ್ನು ತಾತ್ಕಾಲಿಕವಾಗಿ ಆರು ತಿಂಗಳ ಅವಧಿಗೆ ಮುಂದುವರಿಸುವ ಬಗ್ಗೆ. | ಬೋಧಕ ಆಸ್ಪತ್ರೆಗೆ ಶುಶ್ರೂಷಕರ ಹುದ್ದೆಗಳು ಕೊರತೆ ಇದಿದ್ದರಿಂದ 11ತಿಂಗಳ ಅವಧಿಗೆ ತಾತ್ಕಾಲಿಕವಾಗಿ 40 ಟ್ರೈನಿಂಗ್ ಸ್ಟಾಫ್ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಮೇ-2009ರ ಅಂತ್ಯಕ್ಕೆ ನಿಗದಿತ ಅವಧಿ ಮುಗಿದಿದ್ದರಿಂದ ಸದರಿ ಟ್ರೈನಿಂಗ್ ಸ್ಟಾಫ್ ನರ್ಸ್‌ಗಳನ್ನೇ ಪುನ: ಆರು ತಿಂಗಳ ಅವಧಿಗೆ ಮುಂದುವರಿಸಲಾಗಿ ರುತ್ತದೆ. ಈ ಅವಧಿಯು ಸಹ ದಿನಾಂಕ: 02-04-2010ಕ್ಕೆ ಮುಗಿಯುತ್ತಿರುವುದರಿಂದ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 37 ಟ್ರೈನಿಂಗ್ ಸ್ಟಾಫ್ ನರ್ಸ್‌ಗಳ ಸೇವೆಯನ್ನು ಒಂದು ದಿನ ಬಿಡುಗಡೆ ಮಾಡಿ ನಂತರ ಸೇವೆಯನ್ನು ಪುನ: 06ತಿಂಗಳ ಅವಧಿಗೆ ಮುಂದುವರಿಸಲು ಅನುಮೋದನೆ ನೀಡಲಾಯಿತು. |
| 17 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು. | |

(ಶ್ರೀನಿವಾಸ ಗೌಡ)
ಆರ್ಥಿಕ ಅಧಿಕಾರಿಗಳು, ಹಾಗೂ
ಸದಸ್ಯ ಕಾರ್ಯದರ್ಶಿ, ಆರ್ಥಿಕ ಸಮಿತಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

(ಡಾ. ಕೆ.ಎಸ್.ಗಂಗಾಧರ )
ಸದಸ್ಯರು ಆರ್ಥಿಕ ಸಮಿತಿ ಹಾಗೂ
ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

(ಶ್ರೀ ವಿ. ಉಮೇಶ್)
ಅಧ್ಯಕ್ಷರು ಆರ್ಥಿಕ ಸಮಿತಿ, ಹಿಮ್ಸ್, ಹಾಗೂ
ಪ್ರಧಾನ ಕಾರ್ಯದರ್ಶಿಗಳು( ವೈ.ಶಿ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಬೆಂಗಳೂರು.

ವಿ. ಉಮೇಶ್ ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ) ಕರ್ನಾಟಕ ಸರ್ಕಾರ